# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 539(585)

ಸದಸ್ಯರ ಹೆಸರು : ಶ್ರೀ ಡಾ. ಎಂ.ಜಿ ಮುಳೆ

ಉತ್ತರಿಸಬೇಕಾದ ದಿನಾಂಕ : 14.08.2025

ಉತ್ತರಿಸುವ ಸಚಿವರು : ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಒಳ ಮೀಸಲಾತಿ ಜಾರಿ ವಿಳಂಬದಿಂದಾಗಿ ಹಾಗೂ ವಿವಿಧ ಕಾರಣಗಳಿಂದಾಗಿ ಸರ್ಕಾರಿ ಹುದ್ದೆ ಪಡೆಯಲು ಲಕ್ಷಾಂತರ ಅಭ್ಯರ್ಥಿಗಳು ನೇಮಕಾತಿ ಅಧಿಸೂಚನೆಗಳಿಗಾಗಿ ಕಾದು ಕುಳಿತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು, |
| ಆ) | ಬಂದಿದ್ದಲ್ಲಿ ಈಗಾಗಲೇ ನೇಮಕಾತಿಗಾಗಿ ಕಾದುಕುಳಿತಿರುವ ವಯೋಮಿತಿ ಮೀರಿರುವ ಅಭ್ಯರ್ಥಿಗಳು ಯಾವುದೇ ಹೊಸ ನೇಮಕಾತಿಯಿಲ್ಲದಿರುವುದರಿಂದ ಅವಕಾಶ ವಂಚಿತರಾಗುವುದಿಲ್ಲವೆ; ಅವಕಾಶ ವಂಚಿತ ಅಭ್ಯರ್ಥಿಗಳಿಗೆ ಮತ್ತೊಮ್ಮೆ ವಯೋಮಿತಿ ಸಡಿಲಿಕೆಯನ್ನು ನೀಡುವ ಆಲೋಚನೆ ಇದೆಯೇ ಇದ್ದಲ್ಲಿ ಈ ಕುರಿತು ವಿವರ ನೀಡುವುದು; | ವಯೋಮಿತಿ ಸಡಿಲಿಕೆ ಕುರಿತಂತೆ ಸರ್ಕಾರದ ಮುಂದೆ ಯವುದೇ ಪ್ರಸ್ತಾವನೆಗಳು ಇರುವುದಿಲ್ಲ. |
| ಇ) | ವಿವಿಧ ಇಲಾಖೆಗಳ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಯಾವ ಕಾಲಮಿತಿಯಲ್ಲಿ ಕ್ರಮ ಕೈಗೊಳ್ಳಲಾಗುವುದು; | ವಿವಿಧ ಇಲಾಖೆಗಳು ತಮ್ಮ ಇಲಾಖೆಯಲ್ಲಿ ಅಳವಡಿಸಿಕೊಂಡಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಖಾಲಿಯಿರುವ ಹುದ್ದೆಗಳಿಗೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿ ಆರ್ಥಿಕ ಇಲಾಖೆಯಿಂದ ಅನುಮೋದಿತವಾದ ಪ್ರಸ್ತಾವನೆಗಳನ್ನು ಕಾಲ ಕಾಲಕ್ಕೆ ನಿಯಮಾನುಸಾರ ಭರ್ತಿ ಮಾಡಲು ಕ್ರಮ ವಹಿಸಲಾಗುತ್ತಿದೆ. |
| ಈ) | ಪ್ರಸ್ತುತ ರಾಜ್ಯ ಸರ್ಕಾರವು ಉದ್ಯೋಗ ನೇಮಕಾತಿಯಲ್ಲಿ ಎಷ್ಟು ಪ್ರಮಾಣದ ಮೀಸಲಾತಿಯನ್ನು ಹಾಗೂ ಯಾವ ರೋಸ್ಟರ್ ಬಿಂದುವನ್ನು ಪಾಲಿಸುತ್ತಿದೆ. ಈ ಸದರಿ ಮೀಸಲಾತಿಗೆ ಕಾನೂನು ಮಾನ್ಯತೆ ಹಾಗೂ ಸಿಂಧುತ್ವ ಇದೆಯೇ; | ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅಧಿನಿಯಮ, 2022ರನ್ವಯ ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಪಂಗಡಗಳಿಗೆ ಮೀಸಲಾತಿಯನ್ನು ಶೇಕಡಾ ಹದಿನೈದರಿಂದ ಶೇಕಡ ಹದಿನೇಳರಷ್ಟಕ್ಕೆ ಹಾಗೂ ಶೇಕಡಾ ಮೂರರಿಂದ ಶೇಕಡ ಏಳರಷ್ಟಕ್ಕೆ ಅನುಕ್ರಮವಾಗಿ ಹೆಚ್ಚಿಸಲಾಗಿರುತ್ತದೆ. ಅದರಂತೆ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 1 ಸೇಹಿಮ 2022, ದಿನಾಂಕ:28.12.2022ರಲ್ಲಿ 100 ಬಿಂದುಗಳ ಪರಿಷ್ಕೃತ ರೋಸ್ಟರನ್ನು ನಿಗದಿಪಡಿಸಲಾಗಿರುತ್ತದೆ. |

| | | |
|---|---|---|
| | | ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯು ಅರ್ಜಿ ಸಂಖ್ಯೆ:2144/2024ರ ದಿನಾಂಕ:28.05.2025 ರಂದು ನೀಡಿರುವ ಆದೇಶದಲ್ಲಿ, ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 1 ಸೇಹಿಮ 2022, ದಿನಾಂಕ:28.12.2022ನ್ನು ರದ್ದುಪಡಿಸಿರುತ್ತದೆ.<br><br>ಮಾನ್ಯ ನ್ಯಾಯ ಮಂಡಳಿಯು ದಿನಾಂಕ 28.05.2025ರಂದು ನೀಡಿರುವ ತೀರ್ಪಿನ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ (ರಿಟ್ ಅರ್ಜಿ ಸಂಖ್ಯೆ: 17968/2025) ಮೇಲ್ಮನವಿಯನ್ನು ಸಲ್ಲಿಸಲಾಗಿರುತ್ತದೆ.<br><br>ಪ್ರಸ್ತುತ ಪ್ರಕರಣವು (ರಿಟ್ ಅರ್ಜಿ ಸಂಖ್ಯೆ: 17968/2025) ದಿನಾಂಕ:31.07.2028ರಂದು ಪ್ರಾಥಮಿಕ ವಿಚಾರಣೆಗೆ ಬಂದಿರುತ್ತದೆ. ಸದರಿ ಪ್ರಕರಣದ ವಿಚಾರಣೆಯ ನಂತರ ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ಮಧ್ಯಂತರ ಆದೇಶದ ಉದ್ಧೃತ ಭಾಗ ಈ ಕೆಳಕಂಡಂತಿದೆ:<br><br>**"it is provided that the Public Service Commission may go ahead with the selection process, however, result of the selection shall not be commenced without the leave of the Court."** |
| ಊ) | ಈಗಾಗಲೇ ವಿವಿಧ ಹುದ್ದೆಗಳ ನೇಮಕಾತಿ ಹಂತದಲ್ಲಿರುವ ಅಧಿಸೂಚನೆಗಳು (ಕರ್ನಾಟಕ ಲೋಕಸೇವಾ ಆಯೋಗದಿಂದ ನಡೆಸುತ್ತಿರುವ ಪರೀಕ್ಷೆಗಳ) ಪೂರ್ಣಗೊಳ್ಳದೇ ವಿಳಂಬವಾಗಲು ಕಾರಣವೇನು; ಯಾವ ಕಾಲಮಿತಿಯಲ್ಲಿ ಈ ನೇಮಕಾತಿಗಳನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು; (ಸ್ಪಷ್ಟನೆಯನ್ನು ನೀಡುವುದು) | ಅನುಬಂಧದಲ್ಲಿ ಲಗತ್ತಿಸಿದೆ. |

**ಸಿಆಸುಇ 222 ಸೇನೆನಿ 2025**

(ಸಿದ್ದರಾಮಯ್ಯ)
ಮುಖ್ಯಮಂತ್ರಿ

| ವಿಧಾನ ಪರಿಷತ್ತಿನ ಸದಸ್ಯರಾದ ಡಾ||ಎಂ.ಜಿ. ಮುಳೆ (ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 539(585)ರ ಉಪ ಪ್ರಶ್ನೆ ಸಂಖ್ಯೆ (ಉ)ಗೆ ಸಂಬಂಧಿಸಿದಂತೆ ಆಯೋಗದ ಉತ್ತರ | | | | | | | |
|---|---|---|---|---|---|---|---|
| ಕ್ರ. ಸಂ. | ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ | ಇಲಾಖೆಯ ಹೆಸರು | ಹುದ್ದೆಗಳ ಹೆಸರು | ಒಟ್ಟು ಹುದ್ದೆಗಳ ಸಂಖ್ಯೆ | ಪ್ರಸ್ತುತ ನೇಮಕಾತಿ ಹಂತ | ಫಲಿತಾಂಶ ವಿಳಂಬಕ್ಕೆ ಕಾರಣ | ಯಾವ ಕಾಲಮಿತಿಯಲ್ಲಿ ಸದರಿ ಹುದ್ದೆಗಳ ನೇಮಕಾತಿಯನ್ನು ಪೂರ್ಣಗೊಳಿಸಲಾಗುವುದು |
| 1 | ಪಿಎಸ್ ಸಿ 647 ಇ(1)/2022-23, ದಿನಾಂಕ:07-09-2022 | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ | ರಾಜ್ಯೇತರ ಸಿವಿಲ್ ಸರ್ವೀಸ್ (Non State Civil Service) ಹುದ್ದೆಗಳಲ್ಲಿನ ಅಧಿಕಾರಿಗಳನ್ನು 2021ನೇ ಸಾಲಿನ ಭಾರತೀಯ ನಾಗರೀಕ ಸೇವಾ ವೃಂದಕ್ಕೆ ಗ್ರೂಪ್ 'ಎ' ವೃಂದದ ಹುದ್ದೆಗಳನ್ನು ಭರ್ತಿ ಮಾಡಲು ಸ್ಪರ್ಧಾತ್ಮಕ ಪರೀಕ್ಷೆ | 4 | ದಿನಾಂಕ:28-01-2024ರಂದು ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲಾಗಿದ್ದು, ಮಾನ್ಯ ಉಚ್ಚ ನ್ಯಾಯಾಲಯವು SLP (C) 6453/2023 ಮತ್ತು SLP (C) 6454/2023ರ ದಿನಾಂಕ: 22-03-2024ರ ಆದೇಶದಲ್ಲಿ "The order dated 22nd August, 2023 does not put any embargo on the declaration of result of the examination. However, even if the result is declared, no further steps shall be taken on the basis of that" ಎಂದು ತಿಳಿಸಿದ್ದು, ಸದರಿ ಆದೇಶದಂತೆ ಸದರಿ ನೇಮಕಾತಿಯ ಲಿಖಿತ ಪರೀಕ್ಷೆಯಲ್ಲಿ ಎಲ್ಲಾ ಅಧಿಕಾರಿಗಳು ಪಡೆದ ಅಂಕಗಳನ್ನು ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಬಗ್ಗೆ ಅಭಿಪ್ರಾಯವನ್ನು ತಿಳಿಸುವಂತೆ ಸರ್ಕಾರಕ್ಕೆ ದಿನಾಂಕ:30-05-2024ರಂದು ಪತ್ರ ಬರೆಯಲಾಗಿದ್ದು, ಇದುವರೆಗೂ ಸರ್ಕಾರದಿಂದ ಅಂಕಗಳನ್ನು ಪ್ರಕಟಿಸುವ ಕುರಿತು ಯಾವುದೇ ಮಾಹಿತಿ ಸ್ವೀಕೃತವಾಗಿರದ ಕಾರಣ ದಿನಾಂಕ:31-07-2025ರಂದು ನೆನಪೋಲೆಯನ್ನು ಸರ್ಕಾರಕ್ಕೆ ರವಾನಿಸಲಾಗಿರುತ್ತದೆ. | ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಸದರಿ ನೇಮಕಾತಿ ಸಂಬಂಧ ಪ್ರಕರಣ ಬಾಕಿ ಇದ್ದು, ಸರ್ಕಾರದಿಂದ ಸ್ಪಷ್ಟೀಕರಣವನ್ನು ನಿರೀಕ್ಷಿಸಲಾಗುತ್ತಿದೆ | ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅಂತಿಮ ತೀರ್ಪು ಮತ್ತು ಸರ್ಕಾರದ ಸ್ಪಷ್ಟೀಕರಣದ ನಂತರ ನೇಮಕಾತಿಯನ್ನು ಪೂರ್ಣಗೊಳಿಸಲಾಗುವುದು. |
| 2 | ಪಿಎಸ್ ಸಿ 509 ಇ(1)/2023-24, ದಿನಾಂಕ:26-02-2024 | ಗೆಜೆಟೆಡ್ ಪ್ರೊಬೇಷನರ್ ಗ್ರೂಪ್ - ಎ ಹುದ್ದೆಗಳು | | | ಸದರಿ ನೇಮಕಾತಿಗೆ ಆಯೋಗವು ದಿನಾಂಕ: 05-05-2024ರಂದು ಪೂರ್ವಭಾವಿ ಪರೀಕ್ಷೆಯನ್ನು ನಡೆಸಲು ದಿನಾಂಕ ನಿಗದಿಪಡಿಸಲಾಗಿತ್ತು. ಆದರೆ ಚುನಾವಣಾ ನೀತಿ ಸಂಹಿತೆ ಜಾರಿಯಾದ್ದರಿಂದ ಸದರಿ ಪರೀಕ್ಷೆಯನ್ನು ಮುಂದೂಡಿ ದಿನಾಂಕ:21-07-2024ರಂದು ನಡೆಸಲು ಮರುನಿಗದಿಪಡಿಸಲಾಗಿತ್ತು.<br><br>ಆದರೆ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 44 ಎಸ್‌ಎಸ್‌ಸಿ 2024, ದಿನಾಂಕ:21-06-2024ರಲ್ಲಿ 2017-18ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ನೇಮಕಾತಿ ಪರೀಕ್ಷೆಗೆ ಅರ್ಜಿ ಸಲ್ಲಿಸಿದ್ದ ಎಲ್ಲಾ ಅಭ್ಯರ್ಥಿಗಳಿಗೆ ವಯಸ್ಸಿನ ನಿರ್ಬಂಧವಿಲ್ಲದೆ ಒಂದು ಬಾರಿಗೆ ಸೀಮಿತಗೊಳಿಸಿ (one time measure) ಅರ್ಜಿ ಸಲ್ಲಿಸಲು ಹೆಚ್ಚುವರಿ ವಿಶೇಷ ಅವಕಾಶವನ್ನು ನೀಡಿ, 2023-24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ ನೇಮಕಾತಿ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಕರ್ನಾಟಕ ಲೋಕಸೇವಾ ಆಯೋಗವು 15 ದಿನಗಳ ಕಾಲಾವಕಾಶವನ್ನು ನೀಡುವಂತೆ ಆದೇಶಿಸಿದ್ದ ಹಿನ್ನೆಲೆಯಲ್ಲಿ ಸದರಿ ಪೂರ್ವಭಾವಿಪರೀಕ್ಷೆಯನ್ನು ದಿನಾಂಕ:25-08-2024ರಂದು ನಡೆಸಲು ಮರುನಿಗದಿಪಡಿಸಲಾಗಿತ್ತು.<br><br>ಆಯೋಗವು ನಡೆಸುವ ವಿವಿಧ ನೇಮಕಾತಿ ಪರೀಕ್ಷೆಗಳ ಪರೀಕ್ಷಾ ದಿನಾಂಕವನ್ನು ನಿಗದಿಪಡಿಸುವ ಮುನ್ನ ಆಯೋಗದಲ್ಲಿ ಸ್ವೀಕೃತವಾದ ಪ್ರಮುಖ ಕೇಂದ್ರ ಪರೀಕ್ಷಾ ಪ್ರಾಧಿಕಾರಿಗಳಾದ ಕೇಂದ್ರ ಲೋಕಸೇವಾ ಆಯೋಗ (ಯು.ಪಿ.ಎಸ್.ಸಿ.), ಸ್ಟಾಫ್ ಸೆಲೆಕ್ಷನ್ ಕಮಿಷನ್ (ಎಸ್.ಎಸ್.ಸಿ) ಹಾಗೂ ರಾಜ್ಯದ ಪರೀಕ್ಷಾ ಪ್ರಾಧಿಕಾರಿಗಳಾದ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆ.ಇ.ಎ.) ಮತ್ತು ಇನ್ನಿತರೆ ಪ್ರಾಧಿಕಾರಗಳಿಂದ ನಿಗದಿಪಡಿಸಲಾದ ಪರೀಕ್ಷಾ ದಿನಾಂಕಗಳ ಕುರಿತಂತಹ ಮಾಹಿತಿಗಳನ್ನು ಪರಿಶೀಲಿಸಿದ ನಂತರವೇ ಪರೀಕ್ಷಾ ದಿನಾಂಕವನ್ನು ನಿಗದಿಪಡಿಸಲಾಗುವುದು. ಮೇಲ್ಕಂಡ ಪರೀಕ್ಷಾ ಪ್ರಾಧಿಕಾರಗಳಿಂದ ಪರೀಕ್ಷಾ ದಿನಾಂಕಗಳ ಕುರಿತಂತಹ ಮಾಹಿತಿಯು ನಿರಂತರವಾಗಿ ಆಯೋಗದಲ್ಲಿ ಸ್ವೀಕೃತವಾಗುತ್ತದೆ.<br><br>ಅದರಂತೆ ದಿನಾಂಕ:25-08-2024ರಂದು ಸದರಿ ಸಂಸ್ಥೆಗಳಿಂದ ಯಾವುದೇ ಪರೀಕ್ಷೆಗಳು | ಚುನಾವಣಾ ನೀತಿ ಸಂಹಿತೆ, ಸರ್ಕಾರದ ವಯೋಮಿತಿ ಸಡಿಲಿಕೆ ಆದೇಶ, ಒಂದೇ ದಿನದಂದೇ ಬ್ಯಾಂಕಿಂಗ್ ಹಾಗೂ ಸದರಿ ಹುದ್ದೆಗಳ ಪೂರ್ವಭಾವಿ ಪರೀಕ್ಷೆ ನಿಗದಿಯಾಗಿದ್ದರಿಂದ ಈ ಪರೀಕ್ಷೆಯನ್ನು ಮುಂದೂಡಲಾಯಿತು ಹಾಗೂ ನ್ಯಾಯಾಲಯದ ಪ್ರಕರಣಗಳಿಂದಾಗಿ ನೇಮಕಾತಿ ಪ್ರಕ್ರಿಯೆಯಲ್ಲಿ ಅಲ್ಪ ವಿಳಂಬವಾಗಿರುತ್ತದೆ. | ಪರೀಕ್ಷೋತ್ತರ ಮೌಲ್ಯಮಾಪನ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಸದರಿ ನೇಮಕಾತಿಯನ್ನು ಶೀಘ್ರದಲ್ಲಿ ಪೂರ್ಣಗೊಳಿಸಲು ಕ್ರಮವಹಿಸಲಾಗುವುದು. |
| | | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ | ಸಹಾಯಕ ಆಯುಕ್ತರು (ಕಿರಿಯ ಶ್ರೇಣಿ) | 40 | | | |
| | | ವಾಣಿಜ್ಯ ತೆರಿಗೆ ಇಲಾಖೆ | ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು | 41 | | | |
| | | ಖಜಾನೆ ಇಲಾಖೆ | ಸಹಾಯಕ ನಿರ್ದೇಶಕರು | 2 | | | |
| | | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಕಾರ್ಯನಿರ್ವಾಹಕ ಅಧಿಕಾರಿ/ಸಹಾಯಕ ಕಾರ್ಯದರ್ಶಿ | 40 | | | |
| | | ಒಳಾಡಳಿತ ಇಲಾಖೆ | ಡಿ.ವೈ.ಎಸ್.ಪಿ. | 9 | | | |
| | | ಸಮಾಜ ಕಲ್ಯಾಣ ಇಲಾಖೆ | ಸಹಾಯಕ ನಿರ್ದೇಶಕರು ಗ್ರೇಡ್-1 | 20 | | | |
| | | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ/ಸಹಾಯಕ ನಿರ್ದೇಶಕರು/ಪ್ರಾಂಶುಪಾಲರು (ಪಿಇಟಿಸಿ) | 7 | | | |

13/08/25

13/08/25

| ವಿಧಾನ ಪರಿಷತ್ತಿನ ಸದಸ್ಯರಾದ ಡಾ\|\|ಎಂ.ಜಿ. ಮುಳೆ (ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 539(585)ರ ಉಪ ಪ್ರಶ್ನೆ ಸಂಖ್ಯೆ (ಉ)ಗೆ ಸಂಬಂಧಿಸಿದಂತೆ ಆಯೋಗದ ಉತ್ತರ | | | | | | | |
|---|---|---|---|---|---|---|---|
| ಕ್ರ. ಸಂ. | ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ | ಇಲಾಖೆಯ ಹೆಸರು | ಹುದ್ದೆಗಳ ಹೆಸರು | ಒಟ್ಟು ಹುದ್ದೆಗಳ ಸಂಖ್ಯೆ | ಪ್ರಸ್ತುತ ನೇಮಕಾತಿ ಹಂತ | ಫಲಿತಾಂಶ ವಿಳಂಬಕ್ಕೆ ಕಾರಣ | ಯಾವ ಕಾಲಮಿತಿಯಲ್ಲಿ ಸದರಿ ಹುದ್ದೆಗಳ ನೇಮಕಾತಿಯನ್ನು ಪೂರ್ಣಗೊಳಿಸಲಾಗುವುದು |
| | | ಗ್ರೂಪ್-ಬಿ ಹುದ್ದೆಗಳು | | | ನಿಗದಿಯಾಗದೇ ಇರುವ ಹಿನ್ನೆಲೆಯಲ್ಲಿ, ಪೂರ್ವಭಾವಿ ಪರೀಕ್ಷೆಯ ದಿನಾಂಕವನ್ನು ನಿಗದಿಪಡಿಸಲಾಗಿತ್ತು. ಬ್ಯಾಂಕಿಂಗ್ ಪರೀಕ್ಷೆ, ಐ.ಬಿ.ಪಿ.ಎಸ್. (ಇನ್‌ಸ್ಟಿಟ್ಯೂಟ್ ಆಫ್ ಬ್ಯಾಂಕಿಂಗ್ ಪರ್ಸೋನೆಲ್ ಸೆಲೆಕ್ಷನ್) ಪರೀಕ್ಷೆ ನಿಗದಿಯಾಗಿರುವ ಕುರಿತು ಆಯೋಗಕ್ಕೆ ಯಾವುದೇ ಅಧಿಕೃತ ಮಾಹಿತಿಯು ಲಭ್ಯವಿರಲಿಲ್ಲ. ಇದಲ್ಲದೆ ಸದರಿ ಹುದ್ದೆಗಳ ಅಧಿಸೂಚನೆಯನ್ನು ದಿನಾಂಕ:01-07-2024ರಂದು ಹೊರಡಿಸಲಾಗಿದ್ದು, ಸದರಿ ಅಧಿಸೂಚನೆಯಲ್ಲಿಯೂ ಪೂರ್ವಭಾವಿ ಪರೀಕ್ಷೆಯನ್ನು 2024ರ ಆಗಸ್ಟ್ ತಿಂಗಳಲ್ಲಿ ನಡೆಸಲಾಗುವುದು ಎಂದು ನಮೂದಾಗಿರುತ್ತದೆ. ಆದರೆ ಆಯೋಗದ ಪೂರ್ವಭಾವಿ ಪರೀಕ್ಷೆಯ ವೇಳಾಪಟ್ಟಿಯನ್ನು ದಿನಾಂಕ:27-06-2024ರಂದೇ ಪ್ರಕಟಿಸಲಾಗಿತ್ತು.<br><br>ಮುಂದುವರೆದು, ದಿನಾಂಕ:25-08-2024ರಂದು ನಿಗದಿಪಡಿಸಲಾಗಿದ್ದ 2023-24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ ಪೂರ್ವಭಾವಿ ಪರೀಕ್ಷೆಗೆ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಸುಮಾರು 700 ಪರೀಕ್ಷಾ ಉಪಕೇಂದ್ರಗಳಿಂದ ಒಪ್ಪಿಗೆ ಪತ್ರಗಳನ್ನು ಪಡೆಯಲಾಗಿದ್ದು, ಸದರಿ ಉಪಕೇಂದ್ರಗಳ ಯಾವುದೇ ಮುಖ್ಯಸ್ಥರುಗಳು ಸದರಿ ದಿನಾಂಕದಂದು ಐ.ಬಿ.ಪಿ.ಎಸ್. ಪರೀಕ್ಷೆ ಇರುವ ಕಾರಣದಿಂದಾಗಿ ಒಪ್ಪಿಗೆ ಪತ್ರ ನೀಡಲು ನಿರಾಕರಿಸದೆ ಎಲ್ಲರು ಪರೀಕ್ಷೆಯನ್ನು ನಡೆಸಲು ಒಪ್ಪಿಗೆ ಸೂಚಿಸಿದ್ದ ಹಿನ್ನಲೆಯಲ್ಲಿ, ಸದರಿ ದಿನಾಂಕದಂದು ಪೂರ್ವಭಾವಿ ಪರೀಕ್ಷೆ ನಡೆಸಲು ಎಲ್ಲಾ ರೀತಿಯ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿತ್ತು.<br><br>ಆದರೆ ಸದರಿ ದಿನದಂದು ಐ.ಬಿ.ಪಿ.ಎಸ್. ಪರೀಕ್ಷೆ ನಿಗದಿಯಾಗಿದ್ದ ಹಿನ್ನೆಲೆಯಲ್ಲಿ, ಮಾನ್ಯ ಮುಖ್ಯಮಂತ್ರಿ ಅವರೊಂದಿಗೆ ಸಮಾಲೋಚಿಸಿ, ಸದರಿ ಪೂರ್ವಭಾವಿ ಪರೀಕ್ಷೆಗೆ ಆಯೋಗವು ಎಲ್ಲಾ ಪರೀಕ್ಷಾ ಪೂರ್ವಸಿದ್ಧತೆಗಳನ್ನು ಮಾಡಿಕೊಂಡಿರುವ ಹಿನ್ನೆಲೆಯಲ್ಲಿ, ಹೆಚ್ಚಿನ ಕಾಲಾವಕಾಶ ನೀಡದೆ, ಬೇರೆ ಪರೀಕ್ಷೆಗಳೊಂದಿಗೆ Overlap ಆಗದಂತೆ ಅಲ್ಪಕಾಲ ಮುಂದೂಡಲು ಆಯೋಗವು ತೀರ್ಮಾನಿಸಿದ ಹಿನ್ನೆಲೆಯಲ್ಲಿ, ದಿನಾಂಕ:27-08-2024ರಂದು ಪೂರ್ವಭಾವಿ ಪರೀಕ್ಷೆಯನ್ನು ಸಕಲಸಿದ್ಧತೆಗಳೊಂದಿಗೆ ರಾಜ್ಯದ 30 ಜಿಲ್ಲೆಗಳ 564 ಪರೀಕ್ಷಾ ಉಪಕೇಂದ್ರಗಳಲ್ಲಿ, ಪರೀಕ್ಷೆಯನ್ನು ನಡೆಸಲಾಗಿರುತ್ತದೆ.<br>ಸದರಿ ಹುದ್ದೆಗಳಿಗೆ ಪೂರ್ವಭಾವಿ ಪರೀಕ್ಷೆಯನ್ನು ದಿನಾಂಕ:27-08-2024ರಂದು ನಡೆಸಲಾಗಿತ್ತು. ಸದರಿ ಪರೀಕ್ಷೆಯ ಎರಡೂ ಪತ್ರಿಕೆಗಳ ಪ್ರಶ್ನೆಪತ್ರಿಕೆಯಲ್ಲಿ, ಸುಮಾರು 57 ಪ್ರಶ್ನೆಗಳ ಭಾಷಾಂತರದಲ್ಲಿ, ಲೋಪವುಂಟಾಗಿರುತ್ತದೆ ಎಂಬ ಕಾರಣಕ್ಕಾಗಿ ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳು ದಿನಾಂಕ:02-09-2024ರಂದು ಫ್ರೀಡಂ ಪಾರ್ಕ್‌ನಲ್ಲಿ, ತೀವ್ರವಾಗಿ ಪ್ರತಿಭಟನೆಯನ್ನು ಮಾಡಿದ ಹಿನ್ನೆಲೆಯಲ್ಲಿ, ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಟ್ವೀಟ್‌ನಲ್ಲಿ, ಹಾಗೂ ಸರ್ಕಾರದ ದಿನಾಂಕ:02-09-2024ರ ಪತ್ರದಲ್ಲಿ, ಮುಂದಿನ ಎರಡು ತಿಂಗಳಲ್ಲಿ, ಭಾನುವಾರದಂದು ಆಯೋಗದಿಂದ ಮರುಪರೀಕ್ಷೆಯನ್ನು ನಡೆಸುವಂತೆ ಆದೇಶಿಸಿದ ಹಿನ್ನೆಲೆಯಲ್ಲಿ, ದಿನಾಂಕ:29-12-2024 ರಂದು ಪೂರ್ವಭಾವಿ ಮರುಪರೀಕ್ಷೆಯನ್ನು ನಡೆಸಲಾಗಿರುತ್ತದೆ. ಪೂರ್ವಭಾವಿ ಮರು ಪರೀಕ್ಷೆಯಿಂದ ಮುಖ್ಯಪರೀಕ್ಷೆಗೆ 1:15 ಅನುಪಾತದಲ್ಲಿ, ಅರ್ಹರಾದ ಅಭ್ಯರ್ಥಿಗಳ ಅರ್ಹತಾಪಟ್ಟಿಯನ್ನು ದಿನಾಂಕ:10-02-2025 ರಂದು ಪ್ರಕಟಿಸಲಾಗಿರುತ್ತದೆ. ಮುಖ್ಯಪರೀಕ್ಷೆಗೆ ದಿನಾಂಕ:13-02-2025ರಂದು ಅಧಿಸೂಚನೆಯನ್ನು ಹೊರಡಿಸಿ, ಮುಖ್ಯಪರೀಕ್ಷೆಯನ್ನು ದಿನಾಂಕ: 03-05-2025, 05-05-2025, 07-05-2025 & 09-05-2025ರಂದು ನಡೆಸಲಾಗಿರುತ್ತದೆ. | | |
| | | ಕಂದಾಯ ಇಲಾಖೆ | ತಹಶೀಲ್ದಾರ್ (ಗ್ರೇಡ್-2) | 51 | | | |
| | | ವಾಣಿಜ್ಯ ತೆರಿಗೆ ಇಲಾಖೆ | ವಾಣಿಜ್ಯ ತೆರಿಗೆ ಅಧಿಕಾರಿ | 59 | | | |
| | | ಕಾರ್ಮಿಕ ಇಲಾಖೆ | ಕಾರ್ಮಿಕ ಅಧಿಕಾರಿ | 4 | | | |
| | | ಒಳಾಡಳಿತ ಇಲಾಖೆ (ಕಾರಾಗೃಹ) | ಸಹಾಯಕ ಅಧೀಕ್ಷಕರು | 3 | | | |
| | | ಸಹಕಾರ ಇಲಾಖೆ | ಸಹಕಾರ ಸಂಘಗಳ ಸಹಾಯಕ ನಿಬಂಧಕರು | 12 | | | |
| | | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ | ಸಹಾಯಕ ನಿರ್ದೇಶಕರು | 9 | | | |
| | | ಆರ್ಥಿಕ ಇಲಾಖೆ (ಅಬಕಾರಿ) | ಅಬಕಾರಿ ಉಪ ಅಧೀಕ್ಷಕರು | 10 | | | |
| | | ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ | ಉದ್ಯೋಗಾಧಿಕಾರಿ | 3 | | | |
| | | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ | ಸಹಾಯಕ ನಿರ್ದೇಶಕರು | 4 | | | |
| | | ನಗರಾಭಿವೃದ್ಧಿ ಇಲಾಖೆ | ಮುಖ್ಯಾಧಿಕಾರಿ (ಗ್ರೇಡ್-1) | 1 | | | |
| | | ಆರ್ಥಿಕ ಇಲಾಖೆ (ಖಜಾನೆ) | ಸಹಾಯಕ ಖಜಾನಾಧಿಕಾರಿ | 46 | | | |
| | | ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ | ಸಹಾಯಕ ನಿರ್ದೇಶಕರು | 9 | | | |
| | | ಪ್ರವಾಸೋದ್ಯಮ ಇಲಾಖೆ | ಸಹಾಯಕ ನಿರ್ದೇಶಕರು | 2 | | | |
| | | ಕರ್ನಾಟಕ ಸರ್ಕಾರದ ಸಚಿವಾಲಯ | ಶಾಖಾಧಿಕಾರಿ | 5 | | | |
| | | ಸಮಾಜ ಕಲ್ಯಾಣ ಇಲಾಖೆ | ಸಹಾಯಕ ನಿರ್ದೇಶಕರು (ಗ್ರೇಡ್-2) | 7 | | | |

**ವಿಧಾನ ಪರಿಷತ್ತಿನ ಸದಸ್ಯರಾದ ಡಾ||ಎಂ.ಜಿ. ಮುಳೆ (ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 539(585)ರ ಉಪ ಪ್ರಶ್ನೆ ಸಂಖ್ಯೆ (ಉ)ಗೆ ಸಂಬಂಧಿಸಿದಂತೆ ಆಯೋಗದ ಉತ್ತರ**

| ಕ್ರ. ಸಂ. | ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ | ಇಲಾಖೆಯ ಹೆಸರು | ಹುದ್ದೆಗಳ ಹೆಸರು | ಒಟ್ಟು ಹುದ್ದೆಗಳ ಸಂಖ್ಯೆ | ಪ್ರಸ್ತುತ ನೇಮಕಾತಿ ಹಂತ | ಫಲಿತಾಂಶ ವಿಳಂಬಕ್ಕೆ ಕಾರಣ | ಯಾವ ಕಾಲಮಿತಿಯಲ್ಲಿ, ಸದರಿ ಹುದ್ದೆಗಳ ನೇಮಕಾತಿಯನ್ನು ಪೂರ್ಣಗೊಳಿಸಲಾಗುವುದು |
|---|---|---|---|---|---|---|---|
| 3 | ಪಿಎಸ್ ಸಿ 516 ಇ(1) (ಹೆಚ್.ಕೆ.)/2023-24, ದಿನಾಂಕ:01-03-2024 | ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ | ಸಹಾಯಕ ನಿಯಂತ್ರಕರು ಗ್ರೂಪ್-ಎ | 15 | ಆಯೋಗವು ಪೂರ್ವಭಾವಿ ಪರೀಕ್ಷೆಯನ್ನು ದಿನಾಂಕ: 28-07-2024ರಂದು ನಡೆಸಿದ್ದು, ಪೂರ್ವಭಾವಿ ಪರೀಕ್ಷೆಯಿಂದ ಮುಖ್ಯ ಪರೀಕ್ಷೆಗೆ 1:20ರ ಅನುಪಾತದಲ್ಲಿ, ಅರ್ಹರಾದ ಅಭ್ಯರ್ಥಿಗಳ ಅರ್ಹತಾ ಪಟ್ಟಿಯನ್ನು ದಿನಾಂಕ:20-09-2024ರಂದು ಪ್ರಕಟಿಸಿರುತ್ತದೆ. ಮುಖ್ಯಪರೀಕ್ಷೆಗೆ ಅಧಿಸೂಚನೆಯನ್ನು ದಿನಾಂಕ:19-11-2024ರಂದು ಹೊರಡಿಸಿದ್ದು, ಮುಖ್ಯ ಪರೀಕ್ಷೆಯನ್ನು ದಿನಾಂಕ:15-04-2025, 16-04-2025, 17-04-2025 & 19-04-2025ರಂದು ನಡೆಸಲಾಗಿರುತ್ತದೆ. ಪರೀಕ್ಷೋತ್ತರ ಕಾರ್ಯ ಪ್ರಗತಿಯಲ್ಲಿರುತ್ತದೆ. | ನೇಮಕಾತಿ ಪ್ರಾಧಿಕಾರವು ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಿದ ನಂತರ ಅಧಿಸೂಚನೆ ಹೊರಡಿಸಿ, ಪರೀಕ್ಷೆಗಳನ್ನು ಜರುಗಿಸಲಾಗಿದ್ದು, ಮೌಲ್ಯಮಾಪನ ಕಾರ್ಯ ಪ್ರಗತಿಯಲ್ಲಿರುತ್ತದೆ. | ಪರೀಕ್ಷೋತ್ತರ ಮೌಲ್ಯಮಾಪನ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಸದರಿ ನೇಮಕಾತಿಯನ್ನು ಶೀಘ್ರದಲ್ಲಿ, ಪೂರ್ಣಗೊಳಿಸಲು ಕ್ರಮವಹಿಸಲಾಗುವುದು. |
| 4 | ಪಿಎಸ್ ಸಿ 517 ಇ(1) (ಆರ್.ಪಿ.ಸಿ.)/2023-24, ದಿನಾಂಕ:01-03-2024 | ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ | ಸಹಾಯಕ ನಿಯಂತ್ರಕರು ಗ್ರೂಪ್-ಎ | 43 | ಆಯೋಗವು ಪೂರ್ವಭಾವಿ ಪರೀಕ್ಷೆಯನ್ನು ದಿನಾಂಕ: 11-08-2024ರಂದು ನಡೆಸಿದ್ದು, ಪೂರ್ವಭಾವಿ ಪರೀಕ್ಷೆಯಿಂದ ಮುಖ್ಯ ಪರೀಕ್ಷೆಗೆ 1:20ರ ಅನುಪಾತದಲ್ಲಿ, ಅರ್ಹರಾದ ಅಭ್ಯರ್ಥಿಗಳ ಅರ್ಹತಾ ಪಟ್ಟಿಯನ್ನು ದಿನಾಂಕ: 18-10-2024ರಂದು ಪ್ರಕಟಿಸಿರುತ್ತದೆ ಮುಖ್ಯಪರೀಕ್ಷೆಗೆ ಅಧಿಸೂಚನೆಯನ್ನು ದಿನಾಂಕ:19-11-2024ರಂದು ಹೊರಡಿಸಿದ್ದು, ಮುಖ್ಯ ಪರೀಕ್ಷೆಯನ್ನು ದಿನಾಂಕ:22-04-2025 ರಿಂದ 25-04-2025ರವರೆಗೆ ನಡೆಸಲಾಗಿರುತ್ತದೆ. ಪರೀಕ್ಷೋತ್ತರ ಕಾರ್ಯ ಪ್ರಗತಿಯಲ್ಲಿರುತ್ತದೆ. | ನೇಮಕಾತಿ ಪ್ರಾಧಿಕಾರವು ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಿದ ನಂತರ ಅಧಿಸೂಚನೆ ಹೊರಡಿಸಿ, ಪರೀಕ್ಷೆಗಳನ್ನು ಜರುಗಿಸಲಾಗಿದ್ದು, ಮೌಲ್ಯಮಾಪನ ಕಾರ್ಯ ಪ್ರಗತಿಯಲ್ಲಿರುತ್ತದೆ. | ಪರೀಕ್ಷೋತ್ತರ ಮೌಲ್ಯಮಾಪನ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಸದರಿ ನೇಮಕಾತಿಯನ್ನು ಶೀಘ್ರದಲ್ಲಿ, ಪೂರ್ಣಗೊಳಿಸಲು ಕ್ರಮವಹಿಸಲಾಗುವುದು. |
| | | | ಲೆಕ್ಕಪರಿಶೋಧನಾಧಿಕಾರಿ ಗ್ರೂಪ್-ಬಿ | 54 | | | |
| 5 | ಪಿಎಸ್ ಸಿ 1639/ಇ(1)/2024-25, ದಿನಾಂಕ:18-09-2024 ತಿದ್ದುಪಡಿ ಅಧಿಸೂಚನೆ ಸಂಖ್ಯೆ: ಪಿಎಸ್ ಸಿ 2440/ಇ(1)/2024-25, ದಿನಾಂಕ:20-01-2025 | ಲೋಕೋಪಯೋಗಿ ಇಲಾಖೆ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಗ್ರೇಡ್-1) ಗ್ರೂಪ್-ಎ (ಹೈ.ಕ.) | 12 | ಸದರಿ ಹುದ್ದೆಗಳಿಗೆ ಸ್ಪರ್ಧಾತ್ಮಕ (ಲಿಖಿತ) ಪರೀಕ್ಷೆಯನ್ನು ದಿನಾಂಕ:18-03-2025 ರಿಂದ 21-03-2025ರವರೆಗೆ ನಡೆಸಲಾಗಿರುತ್ತದೆ. ಪರೀಕ್ಷೋತ್ತರ ಕಾರ್ಯ ಪ್ರಗತಿಯಲ್ಲಿರುತ್ತದೆ. | ನೇಮಕಾತಿ ಪ್ರಾಧಿಕಾರವು ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಿದ ನಂತರ ಕೆಲವು ಅಂಶಗಳ ಕುರಿತು ಸ್ಪಷ್ಟೀಕರಣ ಪಡೆದು ಅಧಿಸೂಚನೆ ಹೊರಡಿಸಿ, ಪರೀಕ್ಷೆಗಳನ್ನು ಜರುಗಿಸಲಾಗಿದ್ದು, ಮೌಲ್ಯಮಾಪನ ಕಾರ್ಯ ಪ್ರಗತಿಯಲ್ಲಿರುತ್ತದೆ. | ಪರೀಕ್ಷೋತ್ತರ ಮೌಲ್ಯಮಾಪನ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಸದರಿ ನೇಮಕಾತಿಯನ್ನು ಶೀಘ್ರದಲ್ಲಿ, ಪೂರ್ಣಗೊಳಿಸಲು ಕ್ರಮವಹಿಸಲಾಗುವುದು. |
| 6 | ಪಿಎಸ್ ಸಿ 1640/ಇ(1)/2024-25, ದಿನಾಂಕ:18-09-2024 ತಿದ್ದುಪಡಿ ಅಧಿಸೂಚನೆ ಸಂಖ್ಯೆ: ಪಿಎಸ್ ಸಿ 2441/ಇ(1)/2024-25, ದಿನಾಂಕ:20-01-2025 | ಲೋಕೋಪಯೋಗಿ ಇಲಾಖೆ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಗ್ರೇಡ್-1) ಗ್ರೂಪ್-ಎ (ಆರ್.ಪಿ.ಸಿ.) | 30 | ಸದರಿ ಹುದ್ದೆಗಳಿಗೆ ಸ್ಪರ್ಧಾತ್ಮಕ (ಲಿಖಿತ) ಪರೀಕ್ಷೆಯನ್ನು ದಿನಾಂಕ:24-02-2025, 25-02-2025, 27-02-2025 & 28-02-2025 ರಂದು ನಡೆಸಲಾಗಿರುತ್ತದೆ. ಸದರಿ ನೇಮಕಾತಿಗೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯದ W.P.No.12879/2025 (S-KSAT) ಶ್ರೀ ಅಖಿಲೇಶ್ ಬಸವನಗೌಡ ಕುಸಗೂರು ಮತ್ತು ಇತರರು V/S ರಾಜ್ಯ ಸರ್ಕಾರ ಹಾಗೂ ಕರ್ನಾಟಕ ಲೋಕಸೇವಾ ಆಯೋಗ ಪ್ರಕರಣದಲ್ಲಿ, ದಿನಾಂಕ:29-04-2025ರಂದು ಮಧ್ಯಂತರ ಆದೇಶ ನೀಡಿದ್ದು, ಮುಂದಿನ ವಿಚಾರಣೆವರೆಗೂ ಆಯ್ಕೆ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿರುತ್ತದೆ. | ಮಾನ್ಯ ಉಚ್ಚ ನ್ಯಾಯಾಲಯದ ಮಧ್ಯಂತರ ಆದೇಶದ ಹಿನ್ನೆಲೆಯಲ್ಲಿ, ಆಯ್ಕೆ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿರುತ್ತದೆ | ಮಾನ್ಯ ಉಚ್ಚ ನ್ಯಾಯಾಲಯದ ಅಂತಿಮ ತೀರ್ಪಿನ ನಂತರ ನೇಮಕಾತಿಯನ್ನು, ಶೀಘ್ರವಾಗಿ ಪೂರ್ಣಗೊಳಿಸಲಾಗುವುದು. |

ವಿಧಾನ ಪರಿಷತ್ತಿನ ಸದಸ್ಯರಾದ ಡಾ||ಎಂ.ಜಿ. ಮುಳೆ (ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 539(585)ರ ಉಪ ಪ್ರಶ್ನೆ ಸಂಖ್ಯೆ (ಉ)ಗೆ ಸಂಬಂಧಿಸಿದಂತೆ ಆಯೋಗದ ಉತ್ತರ

| ಕ್ರ.ಸಂ. | ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ | ಇಲಾಖೆಯ ಹೆಸರು | ಹುದ್ದೆಗಳ ಹೆಸರು | ಒಟ್ಟು ಹುದ್ದೆಗಳ ಸಂಖ್ಯೆ | ಪ್ರಸ್ತುತ ನೇಮಕಾತಿ ಹಂತ | ಫಲಿತಾಂಶ ವಿಳಂಬಕ್ಕೆ ಕಾರಣ | ಯಾವ ಕಾಲಮಿತಿಯಲ್ಲಿ ಸದರಿ ಹುದ್ದೆಗಳ ನೇಮಕಾತಿಯನ್ನು ಪೂರ್ಣಗೊಳಿಸಲಾಗುವುದು |
|---|---|---|---|---|---|---|---|
| 7 | ಇ(2)597/2023-24 ಪಿಎಸ್ ಸಿ, ದಿನಾಂಕ:15.03.2024 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಪಂಚಾಯಿತಿ ಅಭಿವೃದ್ಧಿ ಅಧಿಕಾರಿ- ಉಳಿಕೆ ಮೂಲ ವೃಂದ | 150 | ಸದರಿ ಹುದ್ದೆಗಳ ನೇಮಕಾತಿಗೆ ಕನ್ನಡ ಭಾಷಾ ಪರೀಕ್ಷೆ ಮತ್ತು ಸ್ಪರ್ಧಾತ್ಮಕ ಪರೀಕ್ಷೆಯನ್ನು ದಿನಾಂಕ:07-12-2024 ಮತ್ತು 08-12-2024ರಂದು ನಡೆಸಲಾಗಿರುತ್ತದೆ. ಕನ್ನಡ ಭಾಷಾ ಪರೀಕ್ಷಾ ಫಲಿತಾಂಶವನ್ನು ದಿನಾಂಕ:01-07-2025 ರಂದು ಪ್ರಕಟಿಸಲಾಗಿದ್ದು, ಪ್ರಸ್ತುತ, ಪರೀಕ್ಷೋತ್ತರ ಕಾರ್ಯ ಪ್ರಗತಿಯಲ್ಲಿರುತ್ತದೆ. | — | ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ನಿಯಮಾನುಸಾರ ಕ್ರಮ ವಹಿಸಲಾಗುವುದು. |
| 8 | ಇ(2)598/2023-24 ಪಿಎಸ್ ಸಿ, ದಿನಾಂಕ:15.03.2024 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಪಂಚಾಯಿತಿ ಅಭಿವೃದ್ಧಿ ಅಧಿಕಾರಿ-ಹೈದ್ರಾಬಾದ್ ಕರ್ನಾಟಕ ಸ್ಥಳೀಯ ವೃಂದ | 97 | ಸದರಿ ಹುದ್ದೆಗಳ ಕನ್ನಡ ಭಾಷಾ ಪರೀಕ್ಷೆಯನ್ನು ದಿನಾಂಕ:16-11-2024 ರಂದು ಮತ್ತು ಸ್ಪರ್ಧಾತ್ಮಕ ಪರೀಕ್ಷೆಯನ್ನು17-11-2024 ರಂದು ನಡೆಸಲಾಗಿರುತ್ತದೆ. ಕನ್ನಡ ಭಾಷಾ ಪರೀಕ್ಷಾ ಫಲಿತಾಂಶವನ್ನು ದಿನಾಂಕ:20-06-2025 ರಂದು ಪ್ರಕಟಿಸಲಾಗಿರುತ್ತದೆ. ಅಂತೆಯೇ, ದಿನಾಂಕ:07-08-2025ರಂದು ಅರ್ಹತಾಪಟ್ಟಿಯನ್ನು ಪ್ರಕಟಿಸಲಾಗಿದ್ದು,ಅರ್ಹರಾದ ಅಭ್ಯರ್ಥಿಗಳಿಗೆ ಮೂಲ ದಾಖಲೆಗಳ ಪರಿಶೀಲನೆಗೆಯನ್ನು ದಿನಾಂಕ:29-08-2025 ಹಾಗೂ 30-08-2025ರಂದು ನಡೆಸಲು ಉದ್ದೇಶಿಸಿದ್ದು, ಆಯ್ಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ನಿಯಮಾನುಸಾರ ಕ್ರಮ ವಹಿಸಲಾಗುವುದು. | | |
| 9 | ಇ(2) 581/2023-24ಪಿಎಸ್ ಸಿ, ದಿನಾಂಕ: 29.02.2024 | ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ | ಭೂಮಾಪಕರು-ಉಳಿಕೆ ಮೂಲ ವೃಂದ | 560 | ಸದರಿ ಹುದ್ದೆಗಳ ನೇಮಕಾತಿಯಲ್ಲಿ, ಈಗಾಗಲೇ 264 ಉಳಿಕೆ ಮೂಲ ವೃಂದದ ಹಾಗೂ 100 ಸದರಿ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ, ಹೈದ್ರಾಬಾದ್-ಕರ್ನಾಟಕ ವೃಂದದ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ, ದಿನಾಂಕ:11.03.2024 ರಿಂದ10.04.2024ರವರೆಗೆ ಅರ್ಜಿಯನ್ನು ಆಹ್ವಾನಿಸಲಾಗಿತ್ತು.<br><br>ತದನಂತರ ದಿನಾಂಕ:22-11-2024ರಂದು ಸೇರ್ಪಡೆ ಅಧಿಸೂಚನೆಗಳನ್ನು ಹೊರಡಿಸಲಾಗಿರುತ್ತದೆ. ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 166 ಸೇಸನಿ 2024, ದಿನಾಂಕ:10.09.2024ರಲ್ಲಿನ ಆದೇಶಕ್ಕೆ ಸಂಬಂಧಿಸಿದಂತೆ, ದಿನಾಂಕ:22.11.2024 ರಂದು ತಿದ್ದುಪಡಿ ಅಧಿಸೂಚನೆಯನ್ನು ಪ್ರಕಟಿಸಲಾಗಿರುತ್ತದೆ. ಅದರಂತೆ ಎಲ್ಲಾ ವರ್ಗಗಳ ಅಭ್ಯರ್ಥಿಗಳಿಗೆ 03 ವರ್ಷಗಳ ವಯೋಮಿತಿ ಸಡಲಿಕೆಯನ್ನು ನೀಡಿ ಅಭ್ಯರ್ಥಿಗಳಿಗೆ ದಿನಾಂಕ:25.11.2024 ರಿಂದ 09.12.2024ರವರೆಗೆ ಅರ್ಜಿಯನ್ನು ಸಲ್ಲಿಸಲು 15 ದಿನಗಳ ಕಾಲಾವಕಾಶವನ್ನು ಕಲ್ಪಿಸಲಾಗಿರುತ್ತದೆ.<br><br>ತದನಂತರ, ದಿನಾಂಕ:29.03.2025ರ ಸರ್ಕಾರದ ಸುತ್ತೋಲೆ ಕುರಿತಂತೆ ಆಯೋಗದ ದಿನಾಂಕ:08.04.2025ರ ಸಭೆಯಲ್ಲಿ, "ದಿನಾಂಕ:29.03.2025ರ ಸರ್ಕಾರದ ಸುತ್ತೋಲೆಯನ್ವಯ ದಿನಾಂಕ:25.11.2024ರ ನಂತರ ಹೊರಡಿಸಿರುವ ಅಧಿಸೂಚನೆಗಳನ್ನು ಕೂಡಲೇ ಹಿಂಪಡೆಯುವಂತೆ ಸೂಚಿಸಿದ್ದು, ಸದರಿ ಸೂಚನೆಗಳು ದಿನಾಂಕ:28.10.2024 ರಿಂದ ಅನ್ವಯವಾಗುವುದಾಗಿ ಆದೇಶ ಹೊರಡಿಸಿರುವ ಹಿನ್ನೆಲೆಯಲ್ಲಿ ಸದರಿ ನೇಮಕಾತಿ ಕುರಿತಾದ ಕಾರ್ಯಗಳನ್ನು ತಾತ್ಕಾಲಿಕವಾಗಿ ತಡೆಹಿಡಿಯುವುದು ಸೂಕ್ತ" ಎಂದು ನಿರ್ಣಯಿಸಲಾಗಿರುತ್ತದೆ. | | |
| 10 | ಇ(2) 582/2023-24ಪಿಎಸ್ ಸಿ, ದಿನಾಂಕ: 29.02.2024 | ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ | ಭೂಮಾಪಕರು- ಹೈದ್ರಾಬಾದ್ ಕರ್ನಾಟಕ ಸ್ಥಳೀಯ ವೃಂದ | 190 | | | |
| 11 | ಪಿಎಸ್ಸಿ 1 ಆರ್‌ಟಿಬಿ-1/2023, 13-03-2024 (ಉಳಿಕೆ ಮೂಲ ವೃಂದ) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | ಸಹಾಯಕ ಇಂಜಿನಿಯರ್ (ಸಿವಿಲ್) (ವಿಭಾಗ-1) | 92 | — | ಸದರಿ ಹುದ್ದೆಗಳ ನೇಮಕಾತಿ ಸಂಬಂಧ, 2024ರ ಸೆಪ್ಟೆಂಬರ್ ಮಾಹೆಯಲ್ಲಿ, ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಲು ನಿಗದಿಪಡಿಸಲಾಗಿತ್ತು. ಆದರೆ ಈ ಮಧ್ಯೆ ಸರ್ಕಾರದ ನಡವಳಿ ದಿನಾಂಕ:10-09-2024ರಲ್ಲಿ, ಎಲ್ಲಾ ಪ್ರವರ್ಗಗಳ ಅಭ್ಯರ್ಥಿಗಳಿಗೆ ಒಂದು ಬಾರಿಗೆ ಅನ್ವಯವಾಗುವಂತೆ ಗರಿಷ್ಠ ವಯೋಮಿತಿಯಲ್ಲಿ, 03 ವರ್ಷಗಳ ಸಡಿಲಿಕೆಯನ್ನು ನೀಡುವಂತೆ ಆದೇಶಿಸಿದ್ದು, ಅದರಂತೆ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸಲು ದಿನಾಂಕ:21-09-2024 ರಿಂದ 05-10-2024ರವರೆಗೆ ಕಾಲಾವಕಾಶವನ್ನು ಕಲ್ಪಿಸಲಾಗಿದ್ದು, ತದನಂತರ 2025ರ ಜನವರಿ & ಫೆಬ್ರವರಿ ಮಾಹೆಯಲ್ಲಿ, ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಲಾಗಿದ್ದು, ಸರ್ಕಾರದ ಅಧಿಸೂಚನೆ ದಿನಾಂಕ: 18-03-2025ರ ರಲ್ಲಿ, ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯು ನಡೆಸುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ, ಅಥವಾ ರಾಜ್ಯ ಸರ್ಕಾರವು ಅದಕ್ಕೆ ತತ್ಸಮಾನವೆಂದು ಘೋಷಿಸಿದ ಯಾವುದೇ ಪರೀಕ್ಷೆಯಲ್ಲಿ, ಅಥವಾ ಎಸ್.ಎಸ್ಎಲ್.ಸಿ. ಗಿಂತ ಉನ್ನತ ಮಟ್ಟದ ಪರೀಕ್ಷೆಗಳಲ್ಲಿ, ಕನ್ನಡ ವಿಷಯವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ಅಭ್ಯಸಿಸಿದ್ದರೆ ಅಥವಾ ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡಿ ಅಂತಹ ಪರೀಕ್ಷೆಗಳನ್ನು ಪಾಸು ಮಾಡಿದ್ದರೇ ಅಥವಾ ಆಯೋಗ ಅಥವಾ ಇನ್ನಿತರೆ ಯಾವುದೇ | ಸದರಿ ಹುದ್ದೆಗಳ ನೇಮಕಾತಿಯನ್ನು ಪೂರ್ಣಗೊಳಿಸಲು ಯಾವುದೇ ಕಾಲಮಿತಿಯನ್ನು ನಿಗದಿಪಡಿಸಲಾಗಿರುವುದಿಲ್ಲ. ಆದಷ್ಟು ಶೀಘ್ರವಾಗಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲು |
| | | ಜಲ ಸಂಪನ್ಮೂಲ ಇಲಾಖೆ | ಸಹಾಯಕ ಇಂಜಿನಿಯರ್ (ಸಿವಿಲ್) (ವಿಭಾಗ-1) | 90 | | | |
| | | ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ | ಭೂ ದಾಖಲೆಗಳ ಸಹಾಯಕ ನಿರ್ದೇಶಕರು | 24 | | | |
| | | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ಪತ್ರಾಂಕಿತ ವ್ಯವಸ್ಥಾಪಕರು/ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು | 21 | | | |
| | | ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ | ಸಹಾಯಕ ನಿರ್ದೇಶಕರು | 20 | | | |
| | | ಜಲ ಸಂಪನ್ಮೂಲ ಇಲಾಖೆ | ಸಹಾಯಕ ಇಂಜಿನಿಯರ್ (ಮೆಕ್ಯಾನಿಕಲ್) (ವಿಭಾಗ-1) | 10 | | | |
| | | ಕಾರ್ಖಾನೆಗಳು, ಬಾಯ್ಲರುಗಳು ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ | ಕಾರ್ಖಾನೆಗಳ ಸಹಾಯಕ ನಿರ್ದೇಶಕರು | 7 | | | |
| | | ಕಾರ್ಖಾನೆಗಳು, ಬಾಯ್ಲರುಗಳು ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ | ಬಾಯ್ಲರುಗಳ ಸಹಾಯಕ ನಿರ್ದೇಶಕರು | 3 | | | |

ವಿಧಾನ ಪರಿಷತ್ತಿನ ಸದಸ್ಯರಾದ ಡಾ||ಎಂ.ಜಿ. ಮುಳೆ (ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 539(585)ರ ಉಪ ಪ್ರಶ್ನೆ ಸಂಖ್ಯೆ (ಆ)ಗೆ ಸಂಬಂಧಿಸಿದಂತೆ ಆಯೋಗದ ಉತ್ತರ

| ಕ್ರ. ಸಂ. | ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ | ಇಲಾಖೆಯ ಹೆಸರು | ಹುದ್ದೆಗಳ ಹೆಸರು | ಒಟ್ಟು ಹುದ್ದೆಗಳ ಸಂಖ್ಯೆ | ಪ್ರಸ್ತುತ ನೇಮಕಾತಿ ಹಂತ | ಫಲಿತಾಂಶ ವಿಳಂಬಕ್ಕೆ ಕಾರಣ | ಯಾವ ಕಾಲಮಿತಿಯಲ್ಲಿ ಸದರಿ ಹುದ್ದೆಗಳ ನೇಮಕಾತಿಯನ್ನು ಪೂರ್ಣಗೊಳಿಸಲಾಗುವುದು |
|---|---|---|---|---|---|---|---|
| | | ಅಂತರ್ಜಲ ನಿರ್ದೇಶನಾಲಯ | ಭೂ ವಿಜ್ಞಾನಿ | 10 | | ಆಯ್ಕೆ ಪ್ರಾಧಿಕಾರವು ಈ ಹಿಂದೆ ನಡೆಸಿದ ಕನ್ನಡ ಭಾಷೆಯ ಪರೀಕ್ಷೆಯಲ್ಲಿ (ಕಡ್ಡಾಯ ಕನ್ನಡ ಪರೀಕ್ಷೆ) ಉತ್ತೀರ್ಣರಾಗಿದ್ದರೆ ಅಂತಹ ಅಭ್ಯರ್ಥಿಗಳಿಗೆ ಕನ್ನಡ ಭಾಷಾ ಪರೀಕ್ಷೆಯಿಂದ ವಿನಾಯಿತಿ ನೀಡತಕ್ಕದ್ದೆಂದು ನಿರ್ದಿಷ್ಟಪಡಿಸಿದ್ದು, ಅದರಂತೆ ಅಭ್ಯರ್ಥಿಗಳಿಗೆ ಸದರಿ ಹುದ್ದೆಗಳ ಅರ್ಜಿಯಲ್ಲಿ, ಕನ್ನಡ ಭಾಷೆಯ ವಿವರಗಳನ್ನು ನವೀಕರಿಸಲು ಕಾಲಾವಕಾಶ ನೀಡಲಾಗಿತ್ತು. ತದನಂತರ, ಕನ್ನಡ ಭಾಷಾ ಪರೀಕ್ಷಾ ದಿನಾಂಕವನ್ನು ನಿಗದಿಪಡಿಸುವ ಸಂಬಂಧ, ಯು.ಪಿ.ಎಸ್.ಸಿ., ಕೆ.ಇ.ಎ. ಇನ್ನಿತರ ಪರೀಕ್ಷಾ ಪ್ರಾಧಿಕಾರಗಳು ನಿಗದಿಪಡಿಸಲಾದ ಪರೀಕ್ಷಾ ದಿನಾಂಕಗಳನ್ನು ಹೊರತುಪಡಿಸಿ, ಪ್ರಸ್ತುತ ದಿ:17-08-2025ರಂದು ಕನ್ನಡ ಭಾಷಾ ಪರೀಕ್ಷೆಯನ್ನು ನಡೆಸಲು ನಿಗದಿಪಡಿಸಲಾಗಿರುತ್ತದೆ. | ಕ್ರಮವಹಿಸಲಾಗುವುದು. |

13/08/25

13/08/25

ವಿಧಾನ ಪರಿಷತ್ತಿನ ಸದಸ್ಯರಾದ ಡಾ||ಎಂ.ಜಿ. ಮುಳೆ (ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 539(585)ರ ಉಪ ಪ್ರಶ್ನೆ ಸಂಖ್ಯೆ (ಉ)ಗೆ ಸಂಬಂಧಿಸಿದಂತೆ ಆಯೋಗದ ಉತ್ತರ

| ಕ್ರ. ಸಂ. | ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ | ಇಲಾಖೆಯ ಹೆಸರು | ಹುದ್ದೆಗಳ ಹೆಸರು | ಒಟ್ಟು ಹುದ್ದೆಗಳ ಸಂಖ್ಯೆ | ಪ್ರಸ್ತುತ ನೇಮಕಾತಿ ಹಂತ | ಫಲಿತಾಂಶ ವಿಳಂಬಕ್ಕೆ ಕಾರಣ | ಯಾವ ಕಾಲಮಿತಿಯಲ್ಲಿ ಸದರಿ ಹುದ್ದೆಗಳ ನೇಮಕಾತಿಯನ್ನು ಪೂರ್ಣಗೊಳಿಸಲಾಗುವುದು |
|---|---|---|---|---|---|---|---|
| 12 | ಪಿಎಸ್‌ಸಿ 1 ಆರ್‌ಟಿಬಿ-2/2023, 13-03-2024 (ಹ್ಯೈ.ಕ. ವೃಂದ) | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ಪತ್ರಾಂಕಿತ ವ್ಯವಸ್ಥಾಪಕರು/ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು | 19 | ಸದರಿ ಹುದ್ದೆಗಳಿಗೆ ದಿ:23-02-2025, 02-03-2025, 04-03-2025, 06-03-2025, 08-03-2025, 10-03-2025 ಮತ್ತು 12-03-2025 ರವರೆಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಲಾಗಿದ್ದು, ದಿ:26-07-2025ರಂದು ಕನ್ನಡ ಭಾಷಾ ಪರೀಕ್ಷೆಯನ್ನು ನಡೆಸಲಾಗಿರುತ್ತದೆ. | ಸದರಿ ಹುದ್ದೆಗಳ ನೇಮಕಾತಿ ಸಂಬಂಧ, 2024ರ ಸೆಪ್ಟೆಂಬರ್ ಮಾಹೆಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಲು ನಿಗದಿಪಡಿಸಲಾಗಿತ್ತು. ಆದರೆ ಈ ಮಧ್ಯೆ ಸರ್ಕಾರದ ನಡವಳಿ ದಿನಾಂಕ:10-09-2024ರಲ್ಲಿ ಎಲ್ಲಾ ಪ್ರವರ್ಗಗಳ ಅಭ್ಯರ್ಥಿಗಳಿಗೆ ಒಂದು ಬಾರಿಗೆ ಅನ್ವಯವಾಗುವಂತೆ ಗರಿಷ್ಠ ವಯೋಮಿತಿಯಲ್ಲಿ 03 ವರ್ಷಗಳ ಸಡಿಲಿಕೆಯನ್ನು ನೀಡುವಂತೆ ಆದೇಶಿಸಿದ್ದು, ಅದರಂತೆ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸಲು ದಿನಾಂಕ:21-09-2024 ರಿಂದ 05-10-2024ರವರೆಗೆ ಕಾಲಾವಕಾಶವನ್ನು ಕಲ್ಪಿಸಲಾಗಿದ್ದು, ತದನಂತರ 2025ರ ಜನವರಿ & ಫೆಬ್ರವರಿ ಮಾಹೆಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಲಾಗಿದ್ದು, ಸರ್ಕಾರದ ಅಧಿಸೂಚನೆ ದಿನಾಂಕ: 18-03-2025ರ ರಲ್ಲಿ ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯು ನಡೆಸುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅಥವಾ ರಾಜ್ಯ ಸರ್ಕಾರವು ಅದಕ್ಕೆ ತತ್ಸಮಾನವೆಂದು ಘೋಷಿಸಿದ ಯಾವುದೇ ಪರೀಕ್ಷೆಯಲ್ಲಿ ಅಥವಾ ಎಸ್.ಎಸ್.ಎಲ್.ಸಿ. ಗಿಂತ ಉನ್ನತ ಮಟ್ಟದ ಪರೀಕ್ಷೆಗಳಲ್ಲಿ ಕನ್ನಡ ವಿಷಯವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ಅಭ್ಯಸಿಸಿದ್ದರೆ ಅಥವಾ ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡಿ ಅಂತಹ ಪರೀಕ್ಷೆಗಳನ್ನು ಪಾಸು ಮಾಡಿದ್ದರೆ ಅಥವಾ ಆಯೋಗ ಅಥವಾ ಇನ್ನಿತರ ಯಾವುದೇ ಆಯ್ಕೆ ಪ್ರಾಧಿಕಾರವು ಈ ಹಿಂದೆ ನಡೆಸಿದ ಕನ್ನಡ ಭಾಷೆಯ ಪರೀಕ್ಷೆಯಲ್ಲಿ (ಕಡ್ಡಾಯ ಕನ್ನಡ ಪರೀಕ್ಷೆ) ಉತ್ತೀರ್ಣರಾಗಿದ್ದರೆ ಅಂತಹ ಅಭ್ಯರ್ಥಿಗಳಿಗೆ ಕನ್ನಡ ಭಾಷಾ ಪರೀಕ್ಷೆಯಿಂದ ವಿನಾಯಿತಿ ನೀಡತಕ್ಕದ್ದೆಂದು ನಿರ್ದಿಷ್ಟಪಡಿಸಿದ್ದು, ಅದರಂತೆ ಅಭ್ಯರ್ಥಿಗಳಿಗೆ ಸದರಿ ಹುದ್ದೆಗಳ ಅರ್ಜಿಯಲ್ಲಿ ಕನ್ನಡ ಭಾಷೆಯ ವಿವರಗಳನ್ನು ನವೀಕರಿಸಲು ಕಾಲಾವಕಾಶ ನೀಡಲಾಗಿತ್ತು. ತದನಂತರ, | ಸದರಿ ಹುದ್ದೆಗಳ ನೇಮಕಾತಿಯನ್ನು ಪೂರ್ಣಗೊಳಿಸಲು ಯಾವುದೇ ಕಾಲಮಿತಿಯನ್ನು ನಿಗದಿಪಡಿಸಲಾಗಿರುವುದಿಲ್ಲ. ಆದಷ್ಟು ಶೀಘ್ರವಾಗಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲು ಕ್ರಮವಹಿಸಲಾಗುವುದು. |
| | | ಕಾರ್ಖಾನೆಗಳು, ಬಾಯ್ಲರುಗಳು ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ | ಕಾರ್ಖಾನೆಗಳ ಸಹಾಯಕ ನಿರ್ದೇಶಕರು | 2 | | | |
| | | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | ಸಹಾಯಕ ಇಂಜಿನಿಯರ್ (ಸಿವಿಲ್) | 8 | | | |
| | | ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ | ಭೂ ದಾಖಲೆಗಳ ಸಹಾಯಕ ನಿರ್ದೇಶಕರು | 3 | | | |
| | | ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ | ಸಹಾಯಕ ನಿರ್ದೇಶಕರು | 3 | | | |
| | | ಅಂತರ್ಜಲ ನಿರ್ದೇಶನಾಲಯ | ಭೂ ವಿಜ್ಞಾನಿ | 15 | | | |
| 13 | ಪಿಎಸ್‌ಸಿ 1 ಆರ್‌ಟಿಬಿ- 3/2023 ದಿ:15-03-2024 (ಉ. ಮೂ. ವೃ.) | ಆಯುಷ್ ಇಲಾಖೆಯ | ಸಹ ಪ್ರಾಧ್ಯಾಪಕರು ಹೋಮಿಯೋಪತಿ (ಅನಾಟಮಿ) | 1 | ಸದರಿ ಹುದ್ದೆಗಳಿಗೆ ದಿನಾಂಕ:29-10-2024 ಮತ್ತು 30-10-2024ರಂದು ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲಾಗಿದ್ದು, ಆದರೆ ಯಾವುದೇ ಅಭ್ಯರ್ಥಿಯು ಸಹ ಸದರಿ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗಿರುವುದಿಲ್ಲ, ಆದ್ದರಿಂದ ಮರು ಅಧಿಸೂಚನೆಗಾಗಿ ಹೊಸದಾಗಿ ಪ್ರಸ್ತಾವನೆ ಸಲ್ಲಿಸುವಂತೆ ಆಯುಷ್ ಇಲಾಖೆಗೆ ಪತ್ರದ ಮೂಲಕ ತಿಳಿಸಲಾಗಿರುತ್ತದೆ. | — | — |
| 14 | ಪಿಎಸ್‌ಸಿ 1 ಆರ್‌ಟಿಬಿ-1/2024 ದಿ:29-07-2024 (ಉ. ಮೂ. ವೃ.) | ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ | ಪಶುವೈದ್ಯಾಧಿಕಾರಿಗಳು | 400 | ಸದರಿ ಹುದ್ದೆಗಳಿಗೆ ದಿ:08-04-2025 ಮತ್ತು 09-04-2025ರಂದು ನಡೆಸಲು ನಿಗದಿಪಡಿಸಲಾಗಿದ್ದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದ್ದು, ದಿ:23-01-2025ರ ಸಮಾಜ ಕಲ್ಯಾಣ ಇಲಾಖೆಯ ಪತ್ರದ ಕುರಿತು 25-03-2025 ರಂದು ಪತ್ರ ಬರೆದು ಸ್ಪಷ್ಟೀಕರಣ ಕೋರಲಾಗಿದ್ದು, ಅದರಂತೆ ಇಲಾಖೆಯವರಿಂದ ಈ ಕುರಿತು ಮಾಹಿತಿ/ಸ್ಪಷ್ಟೀಕರಣ ಸ್ವೀಕೃತವಾದ ನಂತರ ಮುಂದಿನ ಕ್ರಮವಹಿಸಲಾಗುವುದು. | ಸದರಿ ಪಶು ವೈದ್ಯಾಧಿಕಾರಿ-400 (348+52ಬ್ಯಾ.ಲಾ.) ಹುದ್ದೆಗಳ ನೇಮಕಾತಿ ಸಂಬಂಧ, ಬ್ಯಾಕ್ ಲಾಗ್ ಹುದ್ದೆಗಳ ಆಯ್ಕೆಪ್ರಕ್ರಿಯೆಗೆ ಸಂಬಂಧಿಸಿದಂತೆ ದಿನಾಂಕ:25-03-2025 ರಂದು ಸಂಬಂಧಪಟ್ಟ ಇಲಾಖೆಗೆ ಪತ್ರ ಬರೆದು ಸ್ಪಷ್ಟೀಕರಣ ಕೋರಲಾಗಿದ್ದು, ಇಲಾಖೆಯವರಿಂದ ಈ ಕುರಿತು ಮಾಹಿತಿ/ಸ್ಪಷ್ಟೀಕರಣ ಸ್ವೀಕೃತವಾಗಿರಲಿಲ್ಲವಾದ್ದರಿಂದ, ದಿ:08-04-2025 ಮತ್ತು 09-04-2025ರಂದು ನಡೆಸಲು ನಿಗದಿಪಡಿಸಲಾಗಿದ್ದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಮುಂದೂಡಲಾಗಿದ್ದು, ಅದರಂತೆ ಸದರಿ ಇಲಾಖೆಯವರಿಂದ ಈ ಕುರಿತು ಇದುವರೆಗೂ ಯಾವುದೇ ಮಾಹಿತಿ/ಸ್ಪಷ್ಟೀಕರಣ ಸ್ವೀಕೃತವಾಗಿರುವುದಿಲ್ಲವಾದ್ದರಿಂದ ನೇಮಕಾತಿ ಪ್ರಕ್ರಿಯೆ ವಿಳಂಬವಾಗಿರುತ್ತದೆ | - |

ವಿಧಾನ ಪರಿಷತ್ತಿನ ಸದಸ್ಯರಾದ ಡಾ||ಎಂ.ಜಿ. ಮುಳೆ (ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 539(585)ರ ಉಪ ಪ್ರಶ್ನೆ ಸಂಖ್ಯೆ (ಅ)ಗೆ ಸಂಬಂಧಿಸಿದಂತೆ ಆಯೋಗದ ಉತ್ತರ

| ಕ್ರ. ಸಂ. | ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ | ಇಲಾಖೆಯ ಹೆಸರು | ಹುದ್ದೆಗಳ ಹೆಸರು | ಒಟ್ಟು ಹುದ್ದೆಗಳ ಸಂಖ್ಯೆ | ಪ್ರಸ್ತುತ ನೇಮಕಾತಿ ಹಂತ | ಫಲಿತಾಂಶ ವಿಳಂಬಕ್ಕೆ ಕಾರಣ | ಯಾವ ಕಾಲಮಿತಿಯಲ್ಲಿ ಸದರಿ ಹುದ್ದೆಗಳ ನೇಮಕಾತಿಯನ್ನು ಪೂರ್ಣಗೊಳಿಸಲಾಗುವುದು |
|---|---|---|---|---|---|---|---|
| 15 | ಪಿಎಸ್‌ಸಿ 1 ಆರ್‌ಟಿಬಿ-3/2024 ದಿ:20-09-2024(ಉ.ಮೂ.ವೃ.) | ಕೃಷಿ ಇಲಾಖೆ | ಕೃಷಿ ಅಧಿಕಾರಿ | 86 | ಸದರಿ ಹುದ್ದೆಗಳಿಗೆ ದಿ:27-09-2025 ಮತ್ತು 28-09-2025ರಂದು ಸ್ಪರ್ಧಾತ್ಮಕ ಪರೀಕ್ಷೆಯನ್ನು ಮತ್ತು ದಿನಾಂಕ:05-10-2025ರಂದು ಕನ್ನಡ ಭಾಷಾ ಪರೀಕ್ಷೆಯನ್ನು ನಡೆಸಲು ನಿಗದಿಪಡಿಸಲಾಗಿರುತ್ತದೆ. | ಸರ್ಕಾರವು ದಿ:18-09-2024ರಂದು ಕ್ರೀಡಾ ಸಾಧಕ ಅಭ್ಯರ್ಥಿಗಳಿಗೆ ಜಾರಿ ಮಾಡಿದ್ದ ಶೇ.2ರಷ್ಟು ಮೀಸಲಾತಿಯನ್ನು ಸದರಿ ಹುದ್ದೆಗಳಿಗೂ ಅಳವಡಿಸಿಕೊಳ್ಳಬೇಕಾಗಿದ್ದರಿಂದ ದಿನಾಂಕ: 07-10-2024ರಿಂದ ಪ್ರಾರಂಭಿಸಬೇಕಿದ್ದ ಅರ್ಜಿ ಸ್ವೀಕಾರ ಪ್ರಕ್ರಿಯೆಯನ್ನು ಮುಂದೂಡಲಾಗಿತ್ತು. ಆದರೆ ಸರ್ಕಾರವು ದಿನಾಂಕ:04-12-2024ರ ಸುತ್ತೋಲೆಯಲ್ಲಿ ಕ್ರೀಡಾ ಸಾಧಕರಿಗೆ ಶೇಕಡ 2ರಷ್ಟು ಹುದ್ದೆಗಳನ್ನು ಮೀಸಲಿರಿಸಿ ಹೊರಡಿಸಲಾಗಿದ್ದ ದಿನಾಂಕ:18-09-2024ರ ಅಧಿಸೂಚನೆಯನ್ನು ತಡೆಹಿಡಿದಿದ್ದರಿಂದ, ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸಲು ದಿನಾಂಕ: 03-01-2025 ರಿಂದ ದಿನಾಂಕ: 01-02-2025ರವರೆಗೆ ಅವಕಾಶ ಕಲ್ಪಿಸಲಾಗಿತ್ತು. ನಂತರ ಸದರಿ ನೇಮಕಾತಿಗೆ(ಕ್ರೀಡಾ ಮೀಸಲಾತಿ ಕುರಿತು) ಮಾನ್ಯ KSAT ಅರ್ಜಿ ಸಂಖ್ಯೆ178-183/2025ರಲ್ಲಿ ತಡೆಯಾಜ್ಞೆ ಇದ್ದುದರಿಂದ, ಪರೀಕ್ಷಾ ದಿನಾಂಕ ನಿಗದಿಪಡಿಸಲಾಗಿರಲಿಲ್ಲ. ಪ್ರಸ್ತುತ ತಡೆಯಾಜ್ಞೆ ತೆರವಾಗಿರುವುದರಿಂದ ಸೆಪ್ಟೆಂಬರ್ ಮತ್ತು ಅಕ್ಟೋಬರ್ ಮಾಹೆಯಲ್ಲಿ ಪರೀಕ್ಷೆ ನಡೆಸಲು ನಿಗದಿಪಡಿಸಲಾಗಿರುತ್ತದೆ. | ಸದರಿ ಹುದ್ದೆಗಳ ನೇಮಕಾತಿಯನ್ನು ಪೂರ್ಣಗೊಳಿಸಲು ಯಾವುದೇ ಕಾಲಮಿತಿಯನ್ನು ನಿಗದಿಪಡಿಸಲಾಗಿರುವುದಿಲ್ಲ. ಆದಷ್ಟು ಶೀಘ್ರವಾಗಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲು ಕ್ರಮವಹಿಸಲಾಗುವುದು. |
| | | ಕೃಷಿ ಇಲಾಖೆ | ಸಹಾಯಕ ಕೃಷಿ ಅಧಿಕಾರಿ | 586 | | | |
| 16 | ಪಿಎಸ್‌ಸಿ 1 ಆರ್‌ಟಿಬಿ-4/2024 ದಿ:20-09-2024 (ಹೈ.ಕ.) | ಕೃಷಿ ಇಲಾಖೆ | ಕೃಷಿ ಅಧಿಕಾರಿ | 42 | ಸದರಿ ಹುದ್ದೆಗಳಿಗೆ ದಿ:06-09-2025 ಮತ್ತು 07-09-2025ರಂದು ಸ್ಪರ್ಧಾತ್ಮಕ ಪರೀಕ್ಷೆಯನ್ನು ಮತ್ತು ದಿನಾಂಕ:04-10-2025ರಂದು ಕನ್ನಡ ಭಾಷಾ ಪರೀಕ್ಷೆಯನ್ನು ನಡೆಸಲು ನಿಗದಿಪಡಿಸಲಾಗಿರುತ್ತದೆ. | | |
| | | ಕೃಷಿ ಇಲಾಖೆ | ಸಹಾಯಕ ಕೃಷಿ ಅಧಿಕಾರಿ | 231 | | | |

13/08/25

13/08/25

ವಿಧಾನ ಪರಿಷತ್ತಿನ ಸದಸ್ಯರಾದ ಡಾ||ಎಂ.ಜಿ. ಮುಳೆ (ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 539(585)ರ ಉಪ ಪ್ರಶ್ನೆ ಸಂಖ್ಯೆ (ಅ)ಗೆ ಸಂಬಂಧಿಸಿದಂತೆ ಆಯೋಗದ ಉತ್ತರ

| ಕ್ರ. ಸಂ. | ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ | ಇಲಾಖೆಯ ಹೆಸರು | ಹುದ್ದೆಗಳ ಹೆಸರು | ಒಟ್ಟು ಹುದ್ದೆಗಳ ಸಂಖ್ಯೆ | ಪ್ರಸ್ತುತ ನೇಮಕಾತಿ ಹಂತ | ಫಲಿತಾಂಶ ವಿಳಂಬಕ್ಕೆ ಕಾರಣ | ಯಾವ ಕಾಲಮಿತಿಯಲ್ಲಿ ಸದರಿ ಹುದ್ದೆಗಳ ನೇಮಕಾತಿಯನ್ನು ಪೂರ್ಣಗೊಳಿಸಲಾಗುವುದು |
|---|---|---|---|---|---|---|---|
| 17 | ಪಿಎಸ್‌ಸಿ 1 ಆರ್‌ಟಿಬಿ-2/2024 ದಿ:07-10-2024 (ಉ. ಮೂ. ವೃ.) | ಬಿಬಿಎಂಪಿ ಇಲಾಖೆ | ಕನ್ನಡ ಉಪನ್ಯಾಸಕರು | 3 | ಸದರಿ ಹುದ್ದೆಗಳಿಗೆ ದಿ: 01-08-2025ರಂದು ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲಾಗಿದ್ದು, ಅಭ್ಯರ್ಥಿಗಳಿಗೆ ಆಕ್ಷೇಪಣೆ ಸಲ್ಲಿಸಲು 07 ದಿನಗಳ ಕಾಲಾವಕಾಶ ಕಲ್ಪಿಸಲಾಗಿತ್ತು. ಅದರಂತೆ ಅಭ್ಯರ್ಥಿಗಳಿಂದ ಸ್ವೀಕೃತವಾಗಿರುವ ಆಕ್ಷೇಪಣೆಗಳನ್ನು ಪರಿಶೀಲಿಸಲಾಗುತ್ತಿದೆ. | —— | ಸದರಿ ಹುದ್ದೆಗಳ ನೇಮಕಾತಿಯನ್ನು ಪೂರ್ಣಗೊಳಿಸಲು ಯಾವುದೇ ಕಾಲಮಿತಿಯನ್ನು ನಿಗದಿಪಡಿಸಲಾಗಿರುವುದಿಲ್ಲ. ಆದಷ್ಟು ಶೀಘ್ರವಾಗಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲು ಕ್ರಮವಹಿಸಲಾಗುವುದು. |
| 18 | ಪಿ.ಎಸ್.ಸಿ. 503 ಆರ್.ಟಿ.ಬಿ-2/2023-24/3494, ದಿ:15-03-2024 **ಉಳಿಕೆ ಮೂಲ ವೃಂದ** | ಜಲಸಂಪನ್ಮೂಲ ಇಲಾಖೆ | ಕಿರಿಯ ಇಂಜಿನಿಯರ್ (ಸಿವಿಲ್) | 216 | ದಿ:16-03-2025ರಂದು ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲಾಗಿದ್ದು, ದಿನಾಂಕ:16-08-2025ರಂದು ಕನ್ನಡ ಭಾಷಾ ಪರೀಕ್ಷೆ ನಡೆಸಲು ದಿನಾಂಕ ನಿಗದಿಪಡಿಸಲಾಗಿದೆ. | ಆಯೋಗದ ಅಧಿಸೂಚನೆ ಸಂಖ್ಯೆ: ಪಿ.ಎಸ್.ಸಿ. 503 ಆರ್.ಟಿ.ಬಿ-2/2023-24/3494, ದಿ:15-03-2024 ರಂದು ಪದವಿ ಪೂರ್ವ ವಿದ್ಯಾರ್ಹತೆಯ ಮಟ್ಟದ ವಿವಿಧ ಇಲಾಖೆಗಳಲ್ಲಿನ ಉಳಿಕೆ ಮೂಲ ವೃಂದದ ಗ್ರೂಪ್ ಸಿ-313 ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಲಾಗಿತ್ತು. ಜಲ ಸಂಪನ್ಮೂಲ ಇಲಾಖೆಯಲ್ಲಿನ ಹುದ್ದೆಗಳ ಸಂಖ್ಯೆಯನ್ನು 26 ಮತ್ತು 04 ಎಂಬುವುದರ ಬದಲಾಗಿ 24 ಮತ್ತು 06 ಎಂದು ಓದಿಕೊಳ್ಳಲು ಹಾಗೂ ಕಿರಿಯ ಎಂಜಿನಿಯರ್(ಸಿವಿಲ್)-54 ಮತ್ತು ಕಿರಿಯ ಎಂಜಿನಿಯರ್ (ಮೆಕ್ಯಾನಿಕಲ್)-06 ನೇರ ನೇಮಕಾತಿ ಹಾಗೂ ಸೇವಾ ನಿರತ ಅಭ್ಯರ್ಥಿಗಳಿಗೆ ಹುದ್ದೆಗಳನ್ನು ಮೀಸಲಿರಿಸಿದ್ದು, ಒಂದೇ ಇಲಾಖೆಯಾಗಿರುವುದರಿಂದ ಸೇವಾ ನಿರತ ಅಭ್ಯರ್ಥಿಗಳು ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸುವಾಗ ನಮೂದಿಸುವ ಆದ್ಯತೆಯನ್ನು ಪರಿಗಣಿಸಲಾಗುವುದಿಲ್ಲ. ಎಂದು ದಿ:14-05-2024 ರಂದು ತಿದ್ದುಪಡಿ ಅಧಿಸೂಚನೆ ಹೊರಡಿಸಲಾಗಿತ್ತು. ಸಾರ್ವಜನಿಕ ಗ್ರಂಥಾಲಯ ಇಲಾಖೆಯ ದಿ:28-05-2024ರ ಪತ್ರದ ಸ್ಪಷ್ಟೀಕರಣದಂತೆ ವಿದ್ಯಾರ್ಹತೆಯನ್ನು ಸೇರ್ಪಡೆಗೊಳಿಸಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ವಿಸ್ತರಿಸಿ ದಿ:28-05-2024 ರಂದು ತಿದ್ದುಪಡಿ ಅಧಿಸೂಚನೆಯನ್ನು ಪ್ರಕಟಿಸಲಾಗಿರುತ್ತದೆ. ತದನಂತರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 166 ಸೇನೆನಿ 2024, ದಿನಾಂಕ:10-09-2024 ರಲ್ಲಿನ ಆದೇಶಕ್ಕೆ ಸಂಬಂಧಿಸಿದಂತೆ ದಿನಾಂಕ:14.10.2024ರಂದು ಅದರಂತೆ ಎಲ್ಲಾ ವರ್ಗಗಳಿಗೆ 03 ವರ್ಷಗಳ ವಯೋಮಿತಿ ಸಡಿಲಿಕೆ ನೀಡಿ | ಸದರಿ ಹುದ್ದೆಗಳ ನೇಮಕಾತಿಯನ್ನು ಪೂರ್ಣಗೊಳಿಸಲು ಯಾವುದೇ ಕಾಲಮಿತಿಯನ್ನು ನಿಗದಿಪಡಿಸಲಾಗಿರುವುದಿಲ್ಲ. ಆದಷ್ಟು ಶೀಘ್ರವಾಗಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲು ಕ್ರಮವಹಿಸಲಾಗುವುದು. |
| | | | ಕಿರಿಯ ಇಂಜಿನಿಯರ್ (ಸಿವಿಲ್) ಜಲಸಂಪನ್ಮೂಲ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸೇವಾ ನಿರತ ಗ್ರೂಪ್-ಸಿ ಸಿಬ್ಬಂದಿಗಳಿಗೆ | 54 | | | |
| | | | ಕಿರಿಯ ಇಂಜಿನಿಯರ್ (ಮೆಕ್ಯಾನಿಕಲ್) | 24 | | | |
| | | | ಕಿರಿಯ ಇಂಜಿನಿಯರ್ (ಮೆಕ್ಯಾನಿಕಲ್) ಜಲಸಂಪನ್ಮೂಲ ಇಲಾಖೆಯಲ್ಲಿ, ಸೇವೆ ಸಲ್ಲಿಸುತ್ತಿರುವ ಸೇವಾ ನಿರತ ಗ್ರೂಪ್-ಸಿ ಸಿಬ್ಬಂದಿಗಳಿಗೆ | 6 | | | |
| | | ಸಾರ್ವಜನಿಕ ಗ್ರಂಥಾಲಯ ಇಲಾಖೆ | ಸಹಾಯಕ ಗ್ರಂಥಪಾಲಕ | 13 | | | |
| 19 | ಪಿ.ಎಸ್.ಸಿ. 506 ಆರ್.ಟಿ.ಬಿ-2/2023-24/3497, ದಿ:15-03-2024 **ಉಳಿಕೆ ಮೂಲ ವೃಂದ** | ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ | ಕೈಗಾರಿಕಾ ವಿಸ್ತರಣಾಧಿಕಾರಿ | 50 | ದಿನಾಂಕ:12-07-2025 ರಂದು ಕನನ್ನ ಭಾಷಾ ಪರೀಕ್ಷೆ ಮತ್ತು 13-07-2025ರಂದು ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲಾಗಿರುತ್ತದೆ. | ಆಯೋಗದಿಂದ ದಿ:15-03-2024 ರಂದು ವಿವಿಧ ಇಲಾಖೆಯಲ್ಲಿನ ಗ್ರೂಪ್-ಸಿ ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಲಾಗಿತ್ತು. ಸಾರ್ವಜನಿಕ ಗ್ರಂಥಾಲಯ ಇಲಾಖೆಯ ದಿ:28-05-2024ರ ಪತ್ರದ ಸ್ಪಷ್ಟೀಕರಣದಂತೆ ವಿದ್ಯಾರ್ಹತೆಯನ್ನು ಸೇರ್ಪಡೆಗೊಳಿಸಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ವಿಸ್ತರಿಸಿ ದಿ:28-05-2024ರಂದು ಮತ್ತು ಸರ್ಕಾರದ ಪತ್ರ ದಿ:20.06.2024ರಲ್ಲಿ ತಿಳಿಸಿರುವಂತೆ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯಲ್ಲಿನ ಕೈಗಾರಿಕಾ ವಿಸ್ತರಣಾಧಿಕಾರಿ ಹುದ್ದೆಗಳಿಗೆ BBM ಮತ್ತು B.Tech ಪದವಿಯನ್ನು ಪರಿಗಣಿಸಿ ದಿ:22-07-2024 ರಂದು ತಿದ್ದುಪಡಿ ಅಧಿಸೂಚನೆ ಹೊರಡಿಸಲಾಗಿತ್ತು. ತದನಂತರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 166 ಸೇನೆನಿ 2024, ದಿನಾಂಕ:10-09-2024 ರಲ್ಲಿನ ಆದೇಶಕ್ಕೆ ಸಂಬಂಧಿಸಿದಂತೆ ದಿನಾಂಕ:14.10.2024ರಂದು ತಿದ್ದುಪಡಿ ಅಧಿಸೂಚನೆಯನ್ನು ಪ್ರಕಟಿಸಲಾಗಿರುತ್ತದೆ. ಅದರಂತೆ ಎಲ್ಲಾ ವರ್ಗಗಳಿಗೆ 03 | ಸದರಿ ಹುದ್ದೆಗಳ ನೇಮಕಾತಿಯನ್ನು ಪೂರ್ಣಗೊಳಿಸಲು ಯಾವುದೇ ಕಾಲಮಿತಿಯನ್ನು ನಿಗದಿಪಡಿಸಲಾಗಿರುವುದಿಲ್ಲ. ಆದಷ್ಟು ಶೀಘ್ರವಾಗಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲು ಕ್ರಮವಹಿಸಲಾಗುವುದು. |
| | | ಸಾರ್ವಜನಿಕ ಗ್ರಂಥಾಲಯ ಇಲಾಖೆ | ಗ್ರಂಥಪಾಲಕ | 10 | | | |
| 20 | ಪಿ.ಎಸ್.ಸಿ. 505 ಆರ್.ಟಿ.ಬಿ-2/2023-24/3496, ದಿ:15-03-2024 **ಹೈ.ಕ** | ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ | ಕೈಗಾರಿಕಾ ವಿಸ್ತರಣಾ ಅಧಿಕಾರಿ | 13 | ದಿನಾಂಕ:02-09-2025 ರಂದು ಕನ್ನಡ ಭಾಷಾ ಪರೀಕ್ಷೆ ಮತ್ತು 03-09-2025ರಂದು ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲು ದಿನಾಂಕವನ್ನು ನಿಗದಿಪಡಿಸಲಾಗಿದೆ. | | |
| | | ಸಾರ್ವಜನಿಕ ಗ್ರಂಥಾಲಯ ಇಲಾಖೆ | ಗ್ರಂಥಪಾಲಕ | 3 | | | |
| 21 | ಪಿ.ಎಸ್.ಸಿ. 504 ಆರ್.ಟಿ.ಬಿ-2/2023-24/3495, ದಿ:15-03-2024 **ಹೈ.ಕ** | ಅಂತರಜಲ ನಿರ್ದೇಶನಾಲಯ ಇಲಾಖೆ | ಕಿರಿಯ ಇಂಜಿನಿಯರ್ | 5 | ದಿನಾಂಕ:18-09-2025 ರಂದು ಕನ್ನಡ ಭಾಷಾ ಪರೀಕ್ಷೆ ಮತ್ತು 19-09-2025ರಂದು ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲು ದಿನಾಂಕವನ್ನು ನಿಗದಿಪಡಿಸಲಾಗಿದೆ. | ಆಯೋಗದ ಅಧಿಸೂಚನೆ ಸಂಖ್ಯೆ: ಪಿ.ಎಸ್.ಸಿ. 504 ಆರ್.ಟಿ.ಬಿ-2/2023-24/3495, ದಿ:15-03-2024 ರಂದು ಪದವಿ ಪೂರ್ವ ವಿದ್ಯಾರ್ಹತೆಯ ಮಟ್ಟದ ವಿವಿಧ ಇಲಾಖೆಗಳಲ್ಲಿನ ಹೈ.ಕ ವೃಂದದ ಗ್ರೂಪ್ ಸಿ -97 ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಲಾಗಿತ್ತು. ಸದರಿ ಹುದ್ದೆಗಳಿಗೆ ವಿದ್ಯಾರ್ಹತೆಯನ್ನು Diploma in Civil ಎಂದು ನಿಗದಿಪಡಿಸಲಾಗಿತ್ತು. ಇಲಾಖೆಯ ಸ್ಪಷ್ಟೀಕರಣದನ್ವಯ Must have passed Diploma in Civil Engineering or Diploma Civil Engineering (Draughtsmanship) from a Govt recognised institute [illegible] ಎಂದು ದಿ:14.05.2024 | ಸದರಿ ಹುದ್ದೆಗಳ ನೇಮಕಾತಿಯನ್ನು ಪೂರ್ಣಗೊಳಿಸಲು ಯಾವುದೇ ಕಾಲಮಿತಿಯನ್ನು ನಿಗದಿಪಡಿಸಲಾಗಿರುವುದಿಲ್ಲ. ಆದಷ್ಟು ಶೀಘ್ರವಾಗಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲು ಕ್ರಮವಹಿಸಲಾಗುವುದು. |
| | | ಪೌರಾಡಳಿತ ನಿರ್ದೇಶನಾಲಯ (ಮಹಾನಗರ ಪಾಲಿಕೆ)ದಲ್ಲಿನ (ನಗರ/ಸ್ಥಳೀಯ ಸಂಸ್ಥೆ ಮತ್ತು ಬಿಬಿಎಂಪಿ ಹೊರತುಪಡಿಸಿ) | ಕಿರಿಯ ಇಂಜಿನಿಯರ್(ಸಿವಿಲ್) | 7 | | | |
| | | | ಕಿರಿಯ ಇಂಜಿನಿಯರ್ (ಎಲೆಕ್ಟ್ರಿಕಲ್) | 1 | | | |
| | | ಪೌರಾಡಳಿತ ನಿರ್ದೇಶನಾಲಯದಲ್ಲಿನ (ನಗರ ಸಭೆ/ಪುರ ಸಭೆ/ಪಟ್ಟಣ ಪಂಚಾಯಿತಿ) | ಕಿರಿಯ ಇಂಜಿನಿಯರ್(ಸಿವಿಲ್) | 8 | | | |

13/08/25

13/08/25

ವಿಧಾನ ಪರಿಷತ್ತಿನ ಸದಸ್ಯರಾದ ಡಾ||ಎಂ.ಜಿ. ಮುಳೆ (ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 539(585)ರ ಉಪ ಪ್ರಶ್ನೆ ಸಂಖ್ಯೆ (ಉ)ಗೆ ಸಂಬಂಧಿಸಿದಂತೆ ಆಯೋಗದ ಉತ್ತರ

| ಕ್ರ. ಸಂ. | ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ | ಇಲಾಖೆಯ ಹೆಸರು | ಹುದ್ದೆಗಳ ಹೆಸರು | ಒಟ್ಟು ಹುದ್ದೆಗಳ ಸಂಖ್ಯೆ | ಪ್ರಸ್ತುತ ನೇಮಕಾತಿ ಹಂತ | ಫಲಿತಾಂಶ ವಿಳಂಬಕ್ಕೆ ಕಾರಣ | ಯಾವ ಕಾಲಮಿತಿಯಲ್ಲಿ ಸದರಿ ಹುದ್ದೆಗಳ ನೇಮಕಾತಿಯನ್ನು ಪೂರ್ಣಗೊಳಿಸಲಾಗುವುದು |
|---|---|---|---|---|---|---|---|
| | | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ | ಕಿರಿಯ ಇಂಜಿನಿಯರ್ | 20 | | ... ಮತ್ತು ಸಾರ್ವಜನಿಕ ಗ್ರಂಥಾಲಯ ಇಲಾಖೆಯ ದಿ:28-05-2024ರ ಪತ್ರದ ಸ್ವೀಕರಣದಂತೆ ವಿದ್ಯಾರ್ಹತೆಯನ್ನು ಸೇರ್ಪಡೆಗೊಳಿಸಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ವಿಸ್ತರಿಸಿ ದಿ:28-05-2024 ರಂದು ತಿದ್ದುಪಡಿ ಅಧಿಸೂಚನೆ ಹೊರಡಿಸಲಾಗಿತ್ತು. ತದನಂತರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 166 ಸೇನೆನಿ 2024, ದಿನಾಂಕ:10-09-2024 ರಲ್ಲಿನ ಆದೇಶಕ್ಕೆ ಸಂಬಂಧಿಸಿದಂತೆ ದಿನಾಂಕ:14.10.2024ರಂದು ತಿದ್ದುಪಡಿ ಅಧಿಸೂಚನೆಯನ್ನು ಪ್ರಕಟಿಸಲಾಗಿರುತ್ತದೆ. ಅದರಂತೆ ಎಲ್ಲಾ ವರ್ಗಗಳಿಗೆ 03 ವರ್ಷಗಳ ವಯೋಮಿತಿ ಸಡಿಲಿಕೆ ನೀಡಿ ಅಭ್ಯರ್ಥಿಗಳು ದಿನಾಂಕ:15.10.2024 ರಿಂದ 30.10.2024ರವರೆಗೆ ಅರ್ಜಿ ಸಲ್ಲಿಸಲು 15 ದಿನಗಳ ಕಾಲಾವಕಾಶವನ್ನು ಕಲ್ಪಿಸಿ, ಅರ್ಜಿಗಳನ್ನು ಸ್ವೀಕರಿಸಲಾಗಿರುತ್ತದೆ. | |
| | | ಪೌರಾಡಳಿತ ನಿರ್ದೇಶನಾಲಯದಲ್ಲಿನ (ನಗರ ಸಭೆ/ಪುರ ಸಭೆ/ಪಟ್ಟಣ ಪಂಚಾಯಿತಿ) | ನೀರು ಸರಬರಾಜು ಆಪರೇಟರ್ | 4 | | | |
| | | | ಸಹಾಯಕ ನೀರು ಸರಬರಾಜು ಆಪರೇಟರ್ | 5 | | | |
| | | | ಕಿರಿಯ ಆರೋಗ್ಯ ನಿರೀಕ್ಷಕರು | 28 | | | |
| | | ಪೌರಾಡಳಿತ ನಿರ್ದೇಶನಾಲಯ (ಮಹಾನಗರ ಪಾಲಿಕೆ)(ನಗರ/ಸ್ಥಳೀಯ ಸಂಸ್ಥೆ & ಬಿಬಿಎಂಪಿ ಹೊರತುಪಡಿಸಿ) | ಕಿರಿಯ ಆರೋಗ್ಯ ನಿರೀಕ್ಷಕರು | 11 | | | |
| | | ಸಾರ್ವಜನಿಕ ಗ್ರಂಥಾಲಯ ಇಲಾಖೆ | ಸಹಾಯಕ ಗ್ರಂಥಪಾಲಕ | 8 | | | |
| 22 | ಪಿ.ಎಸ್.ಸಿ. 507 ಆರ್.ಟಿ.ಬಿ-2/ 2023-24/3491, ದಿನಾಂಕ:14-03-2024 **ಉಳಿಕೆ ಮೂಲ ವೃಂದ** | ಸಾರಿಗೆ ಇಲಾಖೆ | ಮೋಟಾರು ವಾಹನ ನಿರೀಕ್ಷಕರು | 70 | ದಿನಾಂಕ:13-05-2025 ರಂದು ಕನ್ನಡ ಭಾಷಾ ಪರೀಕ್ಷೆ ಮತ್ತು 14-05-2025ರಂದು ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲಾಗಿರುತ್ತದೆ. | ಆಯೋಗದಿಂದ ದಿ:14-03-2024 ರಂದು ಸಾರಿಗೆ ಇಲಾಖೆಯಲ್ಲಿನ ಮೋಟಾರು ವಾಹನ ನಿರೀಕ್ಷಕರ ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಲಾಗಿತ್ತು. ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ:22-04-2024 ಮತ್ತು ಕೊನೆಯ ದಿನಾಂಕ:21-05-2024 ಎಂದು ನಿಗದಿಪಡಿಸಲಾಗಿತ್ತು. ಆದರೆ ತಾಂತ್ರಿಕ ಕಾರಣದಿಂದ ಸದರಿ ಹುದ್ದೆಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಕಾಲಮಿತಿಯನ್ನು ವಿಸ್ತರಿಸಿ ದಿ:19-06-2024ರಂದು ತಿದ್ದುಪಡಿ ಅಧಿಸೂಚನೆ ಹೊರಡಿಸಲಾಗಿತ್ತು. ತದನಂತರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 166 ಸೇನೆನಿ 2024, ದಿನಾಂಕ:10-09-2024 ರಲ್ಲಿನ ಆದೇಶಕ್ಕೆ ಸಂಬಂಧಿಸಿದಂತೆ ದಿನಾಂಕ:30.10.2024ರಂದು ತಿದ್ದುಪಡಿ ಅಧಿಸೂಚನೆಯನ್ನು ಪ್ರಕಟಿಸಲಾಗಿರುತ್ತದೆ. ಅದರಂತೆ ಎಲ್ಲಾ ವರ್ಗಗಳಿಗೆ 03 ವರ್ಷಗಳ ವಯೋಮಿತಿ ಸಡಿಲಿಕೆ ನೀಡಿ ಅಭ್ಯರ್ಥಿಗಳು ದಿನಾಂಕ:05.11.2024 ರಿಂದ 20.11.2024ರವರೆಗೆ ಅರ್ಜಿ ಸಲ್ಲಿಸಲು 15 ದಿನಗಳ ಕಾಲಾವಕಾಶವನ್ನು ಕಲ್ಪಿಸಿ, ಅರ್ಜಿಗಳನ್ನು ಸ್ವೀಕರಿಸಲಾಗಿರುತ್ತದೆ. | ಸದರಿ ಹುದ್ದೆಗಳ ನೇಮಕಾತಿಯನ್ನು ಪೂರ್ಣಗೊಳಿಸಲು ಯಾವುದೇ ಕಾಲಮಿತಿಯನ್ನು ನಿಗದಿಪಡಿಸಲಾಗಿರುವುದಿಲ್ಲ. ಆದಷ್ಟು ಶೀಘ್ರವಾಗಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲು ಕ್ರಮವಹಿಸಲಾಗುವುದು. |
| 23 | ಪಿ.ಎಸ್.ಸಿ. 508 ಆರ್.ಟಿ.ಬಿ-2/2023-24/3492, ದಿ:14-03-2024 ಹೈ.ಕ | ಸಾರಿಗೆ ಇಲಾಖೆ | ಮೋಟಾರು ವಾಹನ ನಿರೀಕ್ಷಕರು | 6 | ದಿನಾಂಕ:25-06-2025 ರಂದು ಕನ್ನಡ ಭಾಷಾ ಪರೀಕ್ಷೆ ಮತ್ತು 26-06-2025ರಂದು ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲಾಗಿರುತ್ತದೆ. | | |
| 24 | ಸಂಖ್ಯೆ:ಪಿಎಸ್‌ಸಿ 171ಆರ್‌ಟಿಬಿ-4/2023-24, ದಿನಾಂಕ:06-09-2023 | ಸಹಾಯಕ ಉದ್ಯೋಗಾಧಿಕಾರಿ | ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ | 1 | ಸದರಿ ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಯನ್ನು ಕಂಪ್ಯೂಟರ್ ಆಧಾರಿತ ಪರೀಕ್ಷೆ (CBRT) ಮೂಲಕ ನಡೆಸಲು ಟೆಂಡರ್ ಆಹ್ವಾನಿಸಲು ಕ್ರಮವಹಿಸಲಾಗುತ್ತಿದೆ. | | |
| | | | ಒಟ್ಟು: | 3778 | | | |

ಶಾಖಾಧಿಕಾರಿ
ಕರ್ನಾಟಕ ಲೋಕಸೇವಾ ಆಯೋಗ

ಉಪ ಕಾರ್ಯದರ್ಶಿ 13/08/25
ಕರ್ನಾಟಕ ಲೋಕಸೇವಾ ಆಯೋಗ

**ವಿಧಾನ ಪರಿಷತ್ತಿನ ಸದಸ್ಯರಾದ ಡಾ||ಎಂ.ಜಿ. ಮುಳೆ (ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 539(585)ರ ಉಪ ಪ್ರಶ್ನೆ ಸಂಖ್ಯೆ (ಅ)ಗೆ ಸಂಬಂಧಿಸಿದಂತೆ ಆಯೋಗದ ಉತ್ತರ**

| ಕ್ರ. ಸಂ. | ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ | ಇಲಾಖೆಯ ಹೆಸರು | ಹುದ್ದೆಗಳ ಹೆಸರು | ಒಟ್ಟು ಹುದ್ದೆಗಳ ಸಂಖ್ಯೆ | ಪ್ರಸ್ತುತ ನೇಮಕಾತಿ ಹಂತ | ಫಲಿತಾಂಶ ವಿಳಂಬಕ್ಕೆ ಕಾರಣ | ಯಾವ ಕಾಲಮಿತಿಯಲ್ಲಿ ಸದರಿ ಹುದ್ದೆಗಳ ನೇಮಕಾತಿಯನ್ನು ಪೂರ್ಣಗೊಳಿಸಲಾಗುವುದು |
|---|---|---|---|---|---|---|---|
| | | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ | ಕಿರಿಯ ಇಂಜಿನಿಯರ್ | 20 | | ಮತ್ತು ಸಾರ್ವಜನಿಕ ಗ್ರಂಥಾಲಯ ಇಲಾಖೆಯ ದಿ:28-05-2024ರ ಪತ್ರದ ಸ್ಪಷ್ಟೀಕರಣದಂತೆ ವಿದ್ಯಾರ್ಹತೆಯನ್ನು ಸೇರ್ಪಡೆಗೊಳಿಸಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ವಿಸ್ತರಿಸಿ ದಿ:28-05-2024 ರಂದು ತಿದ್ದುಪಡಿ ಅಧಿಸೂಚನೆ ಹೊರಡಿಸಲಾಗಿತ್ತು. ತದನಂತರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 166 ಸೇಸೆನಿ 2024, ದಿನಾಂಕ:10-09-2024 ರಲ್ಲಿನ ಆದೇಶಕ್ಕೆ ಸಂಬಂಧಿಸಿದಂತೆ ದಿನಾಂಕ:14.10.2024ರಂದು ತಿದ್ದುಪಡಿ ಅಧಿಸೂಚನೆಯನ್ನು ಪ್ರಕಟಿಸಲಾಗಿರುತ್ತದೆ. ಅದರಂತೆ ಎಲ್ಲಾ ವರ್ಗಗಳಿಗೆ 03 ವರ್ಷಗಳ ವಯೋಮಿತಿ ಸಡಿಲಿಕೆ ನೀಡಿ ಅಭ್ಯರ್ಥಿಗಳು ದಿನಾಂಕ:15.10.2024 ರಿಂದ 30.10.2024ರವರೆಗೆ ಅರ್ಜಿ ಸಲ್ಲಿಸಲು 15 ದಿನಗಳ ಕಾಲಾವಕಾಶವನ್ನು ಕಲ್ಪಿಸಿ, ಅರ್ಜಿಗಳನ್ನು ಸ್ವೀಕರಿಸಲಾಗಿರುತ್ತದೆ. | |
| | | ಪೌರಾಡಳಿತ ನಿರ್ದೇಶನಾಲಯದಲ್ಲಿನ (ನಗರ ಸಭೆ/ಪುರ ಸಭೆ/ಪಟ್ಟಣ ಪಂಚಾಯಿತಿ) | ನೀರು ಸರಬರಾಜು ಆಪರೇಟರ್ | 4 | | | |
| | | | ಸಹಾಯಕ ನೀರು ಸರಬರಾಜು ಆಪರೇಟರ್ | 5 | | | |
| | | | ಕಿರಿಯ ಆರೋಗ್ಯ ನಿರೀಕ್ಷಕರು | 28 | | | |
| | | ಪೌರಾಡಳಿತ ನಿರ್ದೇಶನಾಲಯ (ಮಹಾನಗರ ಪಾಲಿಕೆ)(ನಗರ/ಸ್ಥಳೀಯ ಸಂಸ್ಥೆ & ಬಿಬಿಎಂಪಿ ಹೊರತುಪಡಿಸಿ) | ಕಿರಿಯ ಆರೋಗ್ಯ ನಿರೀಕ್ಷಕರು | 11 | | | |
| | | ಸಾರ್ವಜನಿಕ ಗ್ರಂಥಾಲಯ ಇಲಾಖೆ | ಸಹಾಯಕ ಗ್ರಂಥಪಾಲಕ | 8 | | | |
| 22 | ಪಿ.ಎಸ್.ಸಿ. 507 ಆರ್.ಟಿ.ಬಿ-2/ 2023-24/3491, ದಿನಾಂಕ:14-03-2024 **ಉಳಿಕೆ ಮೂಲ ವೃಂದ** | ಸಾರಿಗೆ ಇಲಾಖೆ | ಮೋಟಾರು ವಾಹನ ನಿರೀಕ್ಷಕರು | 70 | ದಿನಾಂಕ:13-05-2025 ರಂದು ಕನ್ನಡ ಭಾಷಾ ಪರೀಕ್ಷೆ ಮತ್ತು 14-05-2025ರಂದು ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲಾಗಿರುತ್ತದೆ. | ಆಯೋಗದಿಂದ ದಿ:14-03-2024 ರಂದು ಸಾರಿಗೆ ಇಲಾಖೆಯಲ್ಲಿನ ಮೋಟಾರು ವಾಹನ ನಿರೀಕ್ಷಕರ ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಲಾಗಿತ್ತು, ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ:22-04-2024 ಮತ್ತು ಕೊನೆಯ ದಿನಾಂಕ:21-05-2024 ಎಂದು ನಿಗದಿಪಡಿಸಲಾಗಿತ್ತು. ಆದರೆ ತಾಂತ್ರಿಕ ಕಾರಣದಿಂದ ಸದರಿ ಹುದ್ದೆಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಕಾಲಮಿತಿಯನ್ನು ವಿಸ್ತರಿಸಿ ದಿ:19-06-2024ರಂದು ತಿದ್ದುಪಡಿ ಅಧಿಸೂಚನೆ ಹೊರಡಿಸಲಾಗಿತ್ತು. ತದನಂತರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 166 ಸೇಸೆನಿ 2024, ದಿನಾಂಕ:10-09-2024 ರಲ್ಲಿನ ಆದೇಶಕ್ಕೆ ಸಂಬಂಧಿಸಿದಂತೆ ದಿನಾಂಕ:30.10.2024ರಂದು ತಿದ್ದುಪಡಿ ಅಧಿಸೂಚನೆಯನ್ನು ಪ್ರಕಟಿಸಲಾಗಿರುತ್ತದೆ. ಅದರಂತೆ ಎಲ್ಲಾ ವರ್ಗಗಳಿಗೆ 03 ವರ್ಷಗಳ ವಯೋಮಿತಿ ಸಡಿಲಿಕೆ ನೀಡಿ ಅಭ್ಯರ್ಥಿಗಳು ದಿನಾಂಕ:05.11.2024 ರಿಂದ 20.11.2024ರವರೆಗೆ ಅರ್ಜಿ ಸಲ್ಲಿಸಲು 15 ದಿನಗಳ ಕಾಲಾವಕಾಶವನ್ನು ಕಲ್ಪಿಸಿ, ಅರ್ಜಿಗಳನ್ನು ಸ್ವೀಕರಿಸಲಾಗಿರುತ್ತದೆ. | ಸದರಿ ಹುದ್ದೆಗಳ ನೇಮಕಾತಿಯನ್ನು ಪೂರ್ಣಗೊಳಿಸಲು ಯಾವುದೇ ಕಾಲಮಿತಿಯನ್ನು ನಿಗದಿಪಡಿಸಲಾಗಿರುವುದಿಲ್ಲ. ಆದಷ್ಟು ಶೀಘ್ರವಾಗಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲು ಕ್ರಮವಹಿಸಲಾಗುವುದು. |
| 23 | ಪಿ.ಎಸ್.ಸಿ. 508 ಆರ್.ಟಿ.ಬಿ-2/2023-24/3492, ದಿ:14-03-2024 **ಹೈ.ಕ** | ಸಾರಿಗೆ ಇಲಾಖೆ | ಮೋಟಾರು ವಾಹನ ನಿರೀಕ್ಷಕರು | 6 | ದಿನಾಂಕ:25-06-2025 ರಂದು ಕನ್ನಡ ಭಾಷಾ ಪರೀಕ್ಷೆ ಮತ್ತು 26-06-2025ರಂದು ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲಾಗಿರುತ್ತದೆ. | | |
| 24 | ಸಂಖ್ಯೆ:ಪಿಎಸ್‌ಸಿ 171ಆರ್‌ಟಿಬಿ-4/2023-24, ದಿನಾಂಕ:06-09-2023 | ಸಹಾಯಕ ಉದ್ಯೋಗಾಧಿಕಾರಿ | ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ | 1 | ಸದರಿ ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಯನ್ನು ಕಂಪ್ಯೂಟರ್ ಆಧಾರಿತ ಪರೀಕ್ಷೆ (CBRT) ಮೂಲಕ ನಡೆಸಲು ಟೆಂಡರ್ ಆಹ್ವಾನಿಸಲು ಕ್ರಮವಹಿಸಲಾಗುತ್ತಿದೆ. | - | - |
| | | | ಒಟ್ಟು: | 3778 | | | |

**ಶಾಖಾಧಿಕಾರಿ**
**ಕರ್ನಾಟಕ ಲೋಕಸೇವಾ ಆಯೋಗ**

**ಉಪ ಕಾರ್ಯದರ್ಶಿ** 13/08/25
**ಕರ್ನಾಟಕ ಲೋಕಸೇವಾ ಆಯೋಗ**